2) ಬೆಂಗಳೂರು, ಮತ್ತಿತರ ಭಾಗಗಳಲ್ಲಿ ವಿಪರೀತ ಮಳೆಯಿಂದಾಗಿ ಜನರ ಆಸ್ತಿ ಪಾಸ್ತಿಗೆ ನಷ್ಟ ಉಂಟಾಗಿರುವ ಬಗ್ಗೆ.

ಶ್ರೀ ಕೆ. ಜೆ. ಜಾರ್ಜ್ (ಶಾಂತಿನಗರಕ್ಷೇತ್ರ).—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಬಂದಂತಹ ಪ್ರವಾಹದಿಂದ ಕಷ್ಟ ಅನುಭವಿಸಿದವರಿಗೆ ಹಾಗೂ ತಮ್ಮ ಪ್ರಾಣವನ್ನು ಕಳೆದುಕೊಂಡವರಿಗೆ ಸರ್ಕಾರದವರು ಏನು ಪರಿಹಾರವನ್ನು ಒದಗಿಸಿದ್ದಾರೆ ಎಂಬ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ನಾನು ಮತ್ತು ನಮ್ಮ ಪಕ್ಷದವರು ಹಾಗೂ ಬೇರೆ ಪಕ್ಷದವರೂ ಕೂಡ ನೋಟೀಸ್‌ನ್ನು ಕೊಟ್ಟಿದ್ದೇವು. ಆದರೆ ಅದಕ್ಕೆ ಸರಿಯಾಗಿ ಸರ್ಕಾರದವರು ತಾವು ಏನು ವ್ಯವಸ್ಥೆ ಮಾಡಿದ್ದೇವೆ, ಈ ಕಷ್ಟದಲ್ಲಿ ನೊಂದವರಿಗೆ ಯಾವ ರೀತಿಯ ಪರಿಹಾರವನ್ನು ಕೊಟ್ಟಿದ್ದಾರೆ, ಎಂಬ ಮಾತನ್ನು ಹೇಳುವುದನ್ನು ಬಿಟ್ಟು ಕೇಂದ್ರ ಸರ್ಕಾರಕ್ಕೆ ಅವರು ಒಂದು ಮೆಮೊರಾಂಡಂನ್ನು ಕೊಟ್ಟಿದ್ದಾರೆಂದು, ಅದನ್ನು ಮುಂದಿಟ್ಟುಕೊಂಡು ಚರ್ಚೆ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ೮೦ ಕೋಟಿ ರೂಪಾಯಿಗಳು ಬರಬೇಕು ಅಂತ ಹೇಳುತ್ತಿದ್ದಾರೆ. ರಾಜ್ಯ ಸರ್ಕಾರದವರೇ ಈಗಾಗಲೇ ಒಪ್ಪಿಕೊಂಡಿದ್ದಾರೆ, ಏನೆಂದರೆ, ಕಳೆದ ೯೯ ವರ್ಷಗಳಿಂದ ಇಂತಹ ಮಳೆ ಎಂದೂ ಬಂದಿರಲಿಲ್ಲ ಎಂಬುದನ್ನು ಈ ಮಳೆಯಿಂದ ನೊಂದುತಹವರಿಗೆ ಏನು ಪರಿಹಾರವನ್ನು ಕೊಟ್ಟಿದೆ ಎಂಬುದರ ಯಾವುದೇ ಉತ್ತರವನ್ನು ಸರ್ಕಾರ ಕೊಡದೆ, ಯಾವ ವಿವರವನ್ನೂ ಕೊಡದೇ ಕೇವಲ ಈ ಒಂದು ಮೆಮೊರಾಂಡಂನ್ನು ನಮ್ಮ ಮುಂದಿಟ್ಟುಕೊಂಡು ಚರ್ಚೆ ಮಾಡುತ್ತಿದ್ದೇವೆ. ಕಳೆದ ಜುಲೈ ತಿಂಗಳಲ್ಲಿ ಈ ಬೆಂಗಳೂರು ನಗರದಲ್ಲಿ ದೊಡ್ಡ ಮಳೆ ಬಂತು ಆ ಸಂದರ್ಭದಲ್ಲಿ ಶ್ರೀಮಾನ್ ದೇವೆ ಪಾಂಡೆಯವರು ನಗರಾಭಿವೃದ್ಧಿ ಮಂತ್ರಿಗಳಾಗಿರಲಿಲ್ಲ. ಆಗ ಸುಮಾರು ೮ ಜನ ಪ್ರಾಣವನ್ನು ಕಳೆದುಕೊಂಡರು. ಮಳೆಯ ನೀರಿನಿಂದ ಅನೇಕ ಜನರು ತಮ್ಮ ಮನೆಗಳನ್ನೂ ಕೂಡ ಕಳೆದುಕೊಂಡಿದ್ದಾರೆ. ಆ ಸಂದರ್ಭದಲ್ಲೂ ಸಹ ಕಾರ್ಪೊರೇಷನ್‌ನ ಅಧಿಕಾರಿಗಳು ಕೆಲವು ವಾರದವರೆಗೆ ಕೆಲಸ ಮಾಡಿ ಅದನ್ನು ಅಲ್ಲಿಗೇ ಬಿಟ್ಟರು ಬಹುಶಃ ಮುಂಜಾಗ್ರತಾ ಕ್ರಮವನ್ನು ಮೊದಲೇ ತೆಗೆದುಕೊಂಡಿದ್ದರೆ ಈ ರೀತಿ ಸಾವಿರಾರು ಜನ ತಮ್ಮ ಮನೆಯನ್ನು ಕಳೆದು ಕೊಳ್ಳುವುದಾಗಲಿ, ಸುಮಾರು ೪೦-೪೫ ಜನ ತಮ್ಮ ಪ್ರಾಣವನ್ನು ಕಳೆದುಕೊಳ್ಳುವ ಒಂದು ಸಂದರ್ಭ ಒದಗಿ ಬರುತ್ತಿರಲಿಲ್ಲ. ತಮಗೆ ಗೊತ್ತಿರಬಹುದು. ನಮ್ಮ ಬೆಂಗಳೂರು ನಗರದಲ್ಲಿ ಯಾವುದೇ ನದಿ ಇಲ್ಲ. ಬೆಂಗಳೂರು ನಗರ ಬಿಟ್ಟರೆ ಮೇಲೆ ಇದೆ. ಆದರೂ ಸಣ್ಣ ಮಳೆ ಬಂದರೂ ಸಾವಿರ ನೂರಾರು ಜನ, ಸಾವಿರ ಏರು ಜನ ಮನೆಯನ್ನು ಕಳೆದು ಕೊಳ್ಳುವ ಸ್ಥಿತಿ ಒದಗಿದೆ. ಇದಕ್ಕೆ ಕಾರಣವೇನೆಂದರೆ. ನಮ್ಮ ಡ್ರೈನೇಜ್ ಸಿಸ್ಟಂ ಏನು ಇದೆ, ಅದನ್ನು ಕಳೆದ ಸುಮಾರು ಹತ್ತಾರು ವರ್ಷಗಳಿಂದಲೂ ಕ್ಲೀನ್ ಮಾಡದೇ ಇರತಕ್ಕಂತಹದ್ದು ಇವತ್ತೂ ಕ್ಲೀನ್ ಮಾಡಿಲ್ಲ. ಇವತ್ತೂ ಮತ್ತೆ ಮಳೆ ಬಂದರೆ ನಾಳೆ ತೊಂದರೆಯಾಗುತ್ತದೆ. ಈಗಿರುವಂತಹ ಡ್ರೈನೇಜ್ ಸಿಸ್ಟಂ ಸರಿ ಇಲ್ಲ. ಈ ರೀತಿಯಾಗಿ ನೂರಾರು ಹಾಗೂ ಸಾವಿರಾರು ಮನೆಗಳನ್ನು ಕಳೆದು ಕೊಳ್ಳುವ ಸ್ಥಿತಿ ಜನರಿಗೆ ಒದಗಿದೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಈ ಬಗ್ಗೆ ರಾಜ್ಯ ಸರ್ಕಾರದವರು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಕಳೆದ ಕೆಲವು ದಿವಸಗಳ ಹಿಂದೆ ಮಳೆ ಬಂದಾಗ ಮಂತ್ರಿಗಳೂ ಸಹ ಓಡಾಡಿದರು ಮತ್ತು ಮೇಯರ್‌ರವರೂ ಕೂಡ ಓಡಾಡಿದರು. ಅಲ್ಲಿಂದ ಒಂದು ವಾರ ಆದ ಮೇಲೆ ಎಲ್ಲ ಕೆಲಸವೂ ಹೆಚ್ಚು ಕಡಿಮೆ ನಿಂತು ಹೋಗಿದೆ. ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಮಂತ್ರಿಗಳು ಬಂದ ದಿವಸ ಸುಮಾರು ೨೯೦ ಅಡಿಯಷ್ಟು ಚರಂಡಿಯನ್ನು ಕ್ಲೀನ್ ಮಾಡಿದರು. ಅವರು ಅಲ್ಲಿಂದ ಹೋದ ಕೂಡಲೇ ಆ ಕೆಲಸವನ್ನು ಅಲ್ಲಿಗೇ ನಿಲ್ಲಿಸಿದ್ದಾರೆ ನನ್ನ ಕ್ಷೇತ್ರದಲ್ಲಿ ಲಕ್ಷ್ಮೀಪುರ ಎಂಬ ಜಾಗ ಇದೆ. ಅಲ್ಲಿ ದೊಡ್ಡ ಮಳೆ ಬರಬೇಕಾಗಿಲ್ಲ, ಸಣ್ಣ ಮಳೆ ಬಂದರೂ ಸಾಕು ೪ ಅಡಿ ೫ ಅಡಿ ನೀರು ರಸ್ತೆಯಲ್ಲಿ ನಿಂತು ಜನರಿಗೆ ತೊಂದರೆಯಾಗುತ್ತದೆ. ಏಕೆಂದರೆ ಆ ಭಾಗದಲ್ಲಿರತಕ್ಕ ಡ್ರೈನೇಜ್ ಸಿಸ್ಟಂ ಸರಿ ಇಲ್ಲ, ಆದೇ ರೀತಿ ವಿಲ್ಸರ್ ರಸ್ತೆ ಅಂತ ಒಂದು ಇದೆ, ಅಲ್ಲೂ ಸಹ ಸಣ್ಣ ಮಳೆ ಬಂದರೂ ಜಮ್ಮಾನ ಗ್ರೌಂಡ್‌ನಲ್ಲಿ ೧ ಅಡಿ-೨ ಅಡಿ-೩ ಅಡಿ ನೀರು ನಿಲ್ಲುತ್ತದೆ. ಇದರ ಬಗ್ಗೆ ಕಾರ್ಪೊರೇಷನ್ನಿನ ಯಾವುದೇ ಅಧಿಕಾರಿಗಳು ಕ್ರಮವನ್ನು ತೆಗೆದುಕೊಂಡಿಲ್ಲ. ನಾನೂ ಕೂಡ ಹಲವಾರು ಸಂದರ್ಭದಲ್ಲಿ ಇಂಜಿನೀಯರ್‌ಗೆ ಹೇಳಿದೆನೆ. ಆದರೆ ಅವರೂ ಸಹ ಬಂದು ಕೆಲಸ ಮಾಡಲಿಲ್ಲ.

ತಮಗೆ ಹೇಳುವುದಾದರೆ ಸೆಪ್ಟೆಂಬರ್ ೯-೧೦-೧೧ನೇ ತಾರೀಖು ಅಷ್ಟು ಮಳೆ ಬಂತು. ಮುಖ್ಯ ಮಂತ್ರಿಗಳು, ದೇಶಪಾಂಡೆಯವರು ಮತ್ತು ನಗರದ ಮೇಯರ್ ಅವರು ನನ್ನ ಕ್ಷೇತ್ರಕ್ಕೆ ಬಂದಿದ್ದರು ಅಲಸೂರಿನಲ್ಲಿ ಮಳೆಯಿಂದಾಗಿ ನೂರಾರು ಜನರು ಮನೆ ಕಳೆದುಕೊಂಡಿದ್ದಾರೆ. ಅಲಸೂರಿನ ಕೆರೆ ತುಂಬಿ ತುಳುಕಿದ್ದರಿಂದ ೧೮ನೇ ತಾರೀಖು ರಾತ್ರಿ ೮ ಗಂಟೆಗೆ ಅದು ಬಿರುಕು ಬಿಟ್ಟಿತು. ದೇವರದಯೆಯಿಂದ ಅದು ಒಡೆಯಲಿಲ್ಲ ಒಡೆದಿದ್ದರೆ ಸಾವಿರಾರು ಜನರು ನೀರುಪಾಲು ಆಗಿ ಸಾವನ್ನು ಅಪ್ಪಬೇಕಾಗಿತ್ತು. ಭಾರಿ ಮಳೆಯಿಂದಾಗಿ ಕೆರೆ ತುಂಬಿದ್ದು ಇಂತಹ ಅಪಾಯ ಬರಬಹುದು ಎಂದು ಕಾರ್ಪೊರೇಷನ್ ಅಧಿಕಾರಿಗಳಿಗೆ ಗೊತ್ತಿರಬೇಕಂ. ಆ ಪ್ರಕಾರ ಮುನ್ನೆಚ್ಚರಿಕೆ ವಹಿಸಿ ಕ್ರಮ ತೆಗೆದುಕೊಂಡು ಎಲ್ಲ ವಸ್ತುಗಳನ್ನು ಸಿದ್ಧ ಇಟ್ಟಿರಬೇಕಿತ್ತು. ರಾತ್ರಿ ೮ ಗಂಟೆಗೆ ಬಿರುಕು ಬಿಟ್ಟಿದ್ದು ರಾತ್ರಿ ೧೨ಕ್ಕೆ ನಾನು ಅಲ್ಲಿ ಹೋದೆ ಅಧಿಕಾರಿಗಳು, ಮೇಯರ್ ಅವರು ಅಲ್ಲಿ ಇದ್ದರು. ಆದರೆ ಅಲ್ಲಿಗೆ ಮರಳು ಬರಬೇಕಾದರೆ ಬೆಳಿಗ್ಗೆ ೪ ಗಂಟೆ ಆಗಿತ್ತು. ಅಕಸ್ಮಾತ್ ಕೆರೆ ಒಡೆದಿದ್ದರೆ ಆ ತುರ್ತುಸ್ಥಿತಿಯಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳುವುದು? ಇಂತಹ ವಿಷಯದಲ್ಲಿ ರಾಜ್ಯ ಸರ್ಕಾರವಾಗಲೀ, ಕಾರ್ಪೊರೇಷನ್ ಆಗಲೀ ಮುನ್ನೆಚ್ಚರಿಕೆಯಿಂದ ಕೆಲಸ ಮಾಡಬೇಕು. ಇವರು ಕೊಟ್ಟಿರತಕ್ಕ ಮೆಮೋರಾಂಡಮ್‌ನಲ್ಲಿ ಪೇಜ್ ೯ರಲ್ಲಿ ಹೇಳುತ್ತಾರೆ ೩ ಕೋಟಿ ರೂಪಾಯಿಗಳಷ್ಟು ಮನೆ, ಆಸ್ತಿ ಮತ್ತು ಸಣ್ಣ ಅಂಗಡಿಗಳನ್ನು ಕಳೆದುಕೊಂಡಿದ್ದಾರೆಂದು ಹೇಳುತ್ತಾರೆ. ಇನ್ನೊಂದು ಕಡೆ ಸ್ಟೇಟ್‌ಗೌರ್ನಮೆಂಟ್ ಆರ್ಡರ್ ಪ್ರಕಾರ ಕೇವಲ ೫೬ ಲಕ್ಷಕ್ಕೆ ರಿಲೀಫ್ ಕೊಡುವುದಕ್ಕೆ ಆಗುತ್ತದೆಂದು ಹೇಳುತ್ತಾರೆ. ಏನು ಸ್ವಾಮಿ ಇದು ? ಇವತ್ತು ಇವರು ಅನೌನ್ಸ್ ಮಾಡಿರುವುದು ಏನು ?' ಮನೆ ಕಳೆದುಕೊಂಡವರಿಗೆ ೨ ಸಾವಿರ ರೂಪಾಯಿ ಕೊಡುತ್ತೇವೆ, ಮನೆ ಜಖಂ ಆಗಿರುವವರಿಗೆ ೭೦೦ ರಿಂದ ೧೨೦೦ ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಮನೆ ಯಾರಾ ಕಳೆದುಕೊಂಡಿದ್ದಾರೆ ಅವರು ಬಡವರು ಇದ್ದು ಗುಡಿಸಲು ನಿವಾಸಿಗಳಾಗಿದ್ದಾರೆ. ಇವತ್ತು ನೀರು ಲೇಔಟ್‌ಗಳಲ್ಲಿ ನುಗ್ಗಿದ್ದರೂ ಕೂಡಾ ೩ಮೆಂಟ್ ಇಟ್ಟಿಗೆ ಮನೆಗಳು ಬಿದ್ದು ಹೋಗಿಲ್ಲ, ಬರೀ ಗುಡಿಸಲುಗಳೇ ಹೋಗಿರುವುದು. ಇವತ್ತು ನೀವು ಕಾಂಪನ್‌ಸೇಷನ್ ಕೊಡುವಾಗ ಕೆಲವು ಕಂಡೀಷನ್ ಹಾಕುತ್ತೀರಿ. ಇವತ್ತು ಅವರು ಟೆನೆಂಟ್ ಆಗಿರಬಾರದು ಎಂದು ಹೇಳುತ್ತೀರಿ. ಬೆಂಗಳೂರು ನಗರದಲ್ಲಿ ಮನೆ ಇಟ್ಟುಕೊಂಡಿರುವವರು ಎಷ್ಟು ಜನ ಬಡವರಿದ್ದಾರೆ ಸ್ವಾಮಿ ? ಮತ್ತೆ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಆಗಿರಬಾರದು ಎಂದು ಹೇಳುತ್ತೀರಿ. ಇವತ್ತು ಸ್ಲಮ್‌ಗಳಲ್ಲಿ ಯಾರು ಪ್ಲಾನ್ ಕೊಟ್ಟು, ಪ್ಲಾನ್ ರೀತಿ ಮನೆ ಕಟ್ಟುತ್ತಾರೆ ಸ್ವಾಮಿ ? ಸ್ಲಮ್‌ಗಳಲ್ಲಿ ಅವರು ನೂರಾರು ವರ್ಷಗಳಿಂದ ಇದ್ದಾರೆ. ಮತ್ತೆ ಅವರ ಅವರೇಜ್ ಇನ್‌ಕಮ್ ೧೮೦೦ ರೂಪಾಯಿಗಿಂತಾ ಜಾಸ್ತಿ ಇರಬಾರದು ಎನ್ನುತ್ತೀರಿ. ಬೆಂಗಳೂರಿನಲ್ಲಿ ಜನರು ಬದುಕಬೇಕಾದರೆ ಇಷ್ಟು ಅಲ್ಪ ಹಣ ಸಾಕಾಗುತ್ತದೆಯೇ ಸ್ವಾಮಿ ? ಕೂಲಿ ಮಾಡಿದರೂ ತಿಂಗಳಿಗೆ ೪೦೦ ರೂಪಾಯಿ ಸಿಗುತ್ತದೆ. ಮತ್ತೆ ಲೋ ಲೇಯಿಂಗ್ ಏರಿಯಾದಲ್ಲಿ ಇರಬಾರದು ಎಂದು ಹೇಳುತ್ತೀರಿ. ಯಾವುದು ಲೋ ಲೇಯಿಂಗ್ ಏರಿಯಾ ಸ್ವಾಮಿ ? ಗರಿಯಾದ ಡ್ರೈನೇಜ್ ಮಾಡದೇ ನೀರು ಬಂದು ಹರಿದದ್ದೆಲ್ಲಾ ಲೋ ಲೇಯಿಂಗ್ ಏರಿಯಾ ಏನು ? ಡ್ರೈನೇಜ್ ಪಕ್ಕದಲ್ಲಿ ಮನೆ ಕಟ್ಟಿರಬಾರದು. ೩೦-೪೦-೫೦ ವರ್ಷಗಳಿಂದ ಡ್ರೈನೇಜ್ ಪಕ್ಕದಲ್ಲಿ ಸ್ಲಮ್ ಹಾಕಿದ್ದಾರೆ. ಬೇರೆ ಕಡೆ ಮನೆಗಳನ್ನು ಕಟ್ಟಿ ಅವರನ್ನು ತ್ವರಿತ ಶಿಫ್ಟ್ ಮಾಡಿ, ಆಲ್ಟರ್‌ನೇಟಿವ್ ಜಾಗ ಕೊಡಿ. ಈ ರೀತಿ ಕಂಡೀಷನ್ ಹಾಕಿ ೩ ಕೋಟಿ ರೂಪಾಯಿ ಅವರ ಲೆಕ್ಕದ ಪ್ರಕಾರ ನಷ್ಟವಾದರೆ ಇವರು ಕೊಡುವುದು ೫೬ ಲಕ್ಷ ರೂಪಾಯಿಗಳು. ಇವರು ಕೇಂದ್ರ ಸರ್ಕಾರದಿಂದ ೪೨ ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಆದೂ ಕೂಡಾ ನಗರಕ್ಕೆ ಈ ಬಗ್ಗೆ ಈ ೫೬ ಲಕ್ಷ ಬಿಟ್ಟು ರಸ್ತೆ, ಡ್ರೈನೇಜ್ ಹಾಗೂ ಕಟ್ಟಡಗಳ ರಿಪೇರಿಗಾಗಿ ಇವರು ೪೨ ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ ಈ ಬಗ್ಗೆ ಕಾರ್ಪೊರೇಷನ್ ಹಲವಾರು ವರ್ಷಗಳಿಂದ ಒಂದು ರಿಪೋರ್ಟ್ ತಯಾರು ಮಾಡಿಲ್ಲ, ಮೊಗಡಿ ರಸ್ತೆಯ ಬ್ರಿಡ್ಜನ್ನು ಯಾವಾಗಲೋ ದುರಸ್ತಿ ಮಾಡಬೇಕಾಗಿತ್ತು, ಅದರ ಬಗ್ಗೆ ಸಹ ಕಾರ್ಪೊರೇಷನ್‌ನವರಂ ರಿಪೋರ್ಟ್ ಮಾಡಿಲ್ಲ. ಇವತ್ತು ಕೇಂದ್ರ ಸರ್ಕಾರವನ್ನು ೪೨ ಕೋಟಿ ರೂಪಾಯಿ ಕೊಡಿಯೆಂದು ಕೇಳಿದ್ದಾರೆ, ಆ ಹಣವನ್ನು ಬಡವರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ನನ್ನ ಕ್ಷೇತ್ರದಲ್ಲಿ ಕಾರ್ಪೊರೇಷನ್‌ಗೆ ಸೇರಿದ ರವಿನ್ಯೂ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳು ೧ ಸಾವಿರ ಮನೆಗಳು ಹಾಳಾಗಿವೆಯೆಂದು ಲೆಕ್ಕವನ್ನು ತೆಗೆದುಕೊಂಡಿದ್ದಾರೆ. ಅವರೇ ಲೆಕ್ಕವನ್ನು ತೆಗೆದುಕೊಂಡು ಇವತ್ತು ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಲೆಕ್ಕವನ್ನು ಬರೆಯಲಾಗಿದೆ. ನನ್ನ ಕ್ಷೇತ್ರದಲ್ಲಿ ೭೦ ಮನೆಗಳಿಗೆ ತಲಾ ೨೦೦೦ ರೂಪಾಯಿಗಳಂತೆ ಪರಿಹಾರವನ್ನು ಕೊಟ್ಟಿದ್ದಾರೆ. ಪರಿಹಾರವನ್ನು ಕೊಡುವಾಗ ಯಾವ ರೀತಿ

ಮಾಡುತ್ತಾರೆಂದರೆ ಆ ಭಾಗದ ಕಾರ್ಪೊರೇಟರ್ ಯಾರಿಗೆ ಕೊಡಿಯೆಂದೂ ಹೇಳುತ್ತಾರೋ ಅವರಿಗೆ ಪರಿಹಾರವನ್ನು ಕೊಡುತ್ತಾರೆ. ಕೇಂದ್ರ ಸರ್ಕಾರದ ಬಗ್ಗೆ ಮಲತಾಯಿ ಧೋರಣೆ ತೋರುತ್ತಿದೆಯೆಂದು ದೂರುವ ಇವರು ಏನು ಮಾಡುತ್ತಿದ್ದಾರೆಂದರೆ ಇಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಜನತಾ ಪಕ್ಷದ ಕಾರ್ಪೊರೇಟರ್‌ಗಳು ಇರುವ ಕಡೆ ಪರಿಹಾರವನ್ನು ಕೊಡಿ, ಬೇಡವೆಂದು ಹೇಳುವುದಿಲ್ಲ. ಆದರೆ ಸಾವಿರ ಮನೆಗಳು ಹಾಳಾಗಿರುವ ಕಡೆ ನೀವು ಏತಕ್ಕೆ ಪರಿಹಾರವನ್ನು ಕೊಡಬಾರದು? ನಿಮ್ಮ ಕಾರ್ಪೊರೇಟರ್ ಇಂತಹವರಿಗೆ ಕೊಡಿಯೆಂದು ಹೇಳಿದರೆ ಅಂತಹವರಿಗೆ ಮಾತ್ರ ಕೊಡುತ್ತೀರಿ ಎನ್ನುವ ಸುದ್ದಿ ಬಂದಿದೆ. ಈ ವಿಚಾರದಲ್ಲಿ ನೀವು ಏನು ಹೇಳುತ್ತೀರಿ ? ಪ್ರತಿಯೊಂದು ಹಂತದಲ್ಲೂ ರಾಜಕೀಯ ಮಾಡುವುದು ಬೇಡ. ನೀವು ಮಾತ್ರ ಕೇಂದ್ರ ಸರ್ಕಾರದವರನ್ನು ಕೇಳುತ್ತೀರಿ ? ನನ್ನ ಕ್ಷೇತ್ರದಲ್ಲಿ ಇಂತಹ ವಿಚಾರಗಳು ನಡೆಯುತ್ತಿವೆ. ಬೆಂಗಳೂರಿನಲ್ಲಿ ಆರು ರಿಲೀಫ್ ಕ್ಯಾಂಪ್‌ಗಳನ್ನು ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಸಾವಿರ ಮನೆಗಳು ಹೋಗಿವೆಯೆಂದು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಹಾಗೂ ಕಾರ್ಪೊರೇಷನ್‌ನವರೇ ಹೇಳಿದ್ದರೂ ಒಂದು ರಿಲೀಫ್ ಕ್ಯಾಂಪನ್ನು ಸ್ಥಾಪನೆ ಮಾಡಲಿಲ್ಲ. ಮಾಡಿದ್ದೀರಾ ? ಮಾಡಿದ್ದರೆ ಹೇಳಿ ಮಾತಾಡಿತ್ತಿದರೆ ಜನಾರ್ಧನ ಪೂಜಾರಿಯವರನ್ನು ಬೈಯುತ್ತಾರೆ. ಕಾಂಗ್ರೆಸ್ ಪಕ್ಷದ ವತಿಯಿಂದ ಸುಮಾರ ೧೫೦೦ ಜನರಿಗೆ ೪ ರಿಲೀಫ್ ಕ್ಯಾಂಪುಗಳನ್ನು ತೆರೆದು ೨೫ ದಿವಸಗಳವರೆಗೆ ಊಟ ಕೊಟ್ಟಿದ್ದೇವೆ. ಇದನ್ನು ಮಾನ್ಯ ಪೂಜಾರಿಯವರ ನೇತೃತ್ವದಲ್ಲಿ ಮಾಡಿದ್ದೇವೆ. ಮಾನ್ಯ ಜಾಫರ್ ಷರೀಫ್‌ರವರು ಪ್ರಧಾನಮಂತ್ರಿಗಳ ಪರಿಹಾರ ನಿಧಿಯಿಂದ ಅವರು ಸಹ ಮಾಡಿದ್ದಾರೆ. ಪ್ರತಿಯೊಂದು ವಿಚಾರದಲ್ಲಿಯೂ ನಾವು ಕೆಲಸ ಮಾಡಿ ತೋರಿಸಿಕೊಟ್ಟಿದ್ದೇವೆ. ಆದರೆ ರಾಜ್ಯ ಸರ್ಕಾರದವರು ಅಥವಾ ಕಾರ್ಪೊರೇಷನ್‌ನವರು ಇಂತಹ ಕೆಲಸಗಳನ್ನು ಮಾಡುವುದಕ್ಕೆ ಮುಂದೆ ಬರುವುದಿಲ್ಲ. ನ್ಯಾಚುರಲ್ ಕೆಲಾ ಮಿಟೀಸ್‌ಗೆ ಫಂಡ್ ಇಲ್ಲವೆಂದು ಹೇಳುತ್ತಿದ್ದಾರೆ. ನ್ಯಾಚರಲ್ ಕೆಲಾಮಿಟೀಸ್‌ಗೆ ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಪರಿಹಾರದ ಹಣ ಕೊಡಲಿಕ್ಕೆ ರೂಲ್ಸ್ ಇಲ್ಲವೆಂದು ಹೇಳುತ್ತಾರೆ. ಇದು ಒಂದು ದೋಷವಿರಬಹುದು, ಕಾರ್ಪೊರೇಷನ್‌ನಲ್ಲಿ ನಾವು ಅದರ ರೂಲ್ಸ್ ಪ್ರಕಾರ ಕೆಲಸ ಮಾಡಬೇಕಾಗಿದೆಯೆಂದು ಹೇಳುತ್ತಾರೆ. ನಾವು ಕಾಂಗ್ರೆಸ್ ಶಾಸಕರು ಕೇಳಿಕೊಂಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಅತಿವೃಷ್ಟಿಯಿಂದಾಗಿ ನಷ್ಟವಾಗಿದೆ. ಅದಕ್ಕಾಗಿ ಸಾಕಷ್ಟು ಹಣವನ್ನು ಒದಗಿಸಬೇಕೆಂದು ಕೇಳಿದ್ದೇವೆ. ನಾನಾದರೂ ರಾಜ್ಯ ಸರ್ಕಾರವನ್ನು ಕೇಳುತ್ತಿದ್ದೇನೆ, ಯಾರು ಬಡವರು ಮನೆ ಕಳೆದುಕೊಂಡಿದ್ದಾರೆ, ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿದ್ದಾರೆ. ಇಂತಹವರಿಗೆ ಯಾವುದೇ ಕಂಡೀಷನ್ ಹಾಕದೆ ಪರಿಹಾರ ಕೊಡಬೇಕು.ಬಡ ಜನರಿಗೆ ೨ ಸಾವಿರ ರೂಪಾಯಿ ಕೊಡುವುದನ್ನು ಆದಷ್ಟುಬೇಗ ಕೊಡಲಿಕ್ಕೆ ಸಂಬಂಧಪಟ್ಟ ಇಲಾಖೆಯವರಿಗೆ ಹೇಳಿ. ನಾವು ರಚನಾತ್ಮಕ ಸಲಹೆಗಳನ್ನು ಕೊಡುತ್ತಿದ್ದೇವೆ. ರಚನಾತ್ಮಕ ಕೆಲಸವನ್ನು ಸಹ ಮಾಡುತ್ತಿದ್ದೇವೆ. ಇದನ್ನು ಮಾಡದಿದ್ದರೆ ನಾವು ಶಾಂತಿಯುತವಾಗಿ ಚಳುವಳಿಯನ್ನು ಹೂಡಬೇಕಾಗುತ್ತದೆ. ಕಾರ್ಪೊರೇಷನ್ ಮುಂದೆ ಅವರನ್ನೆಲ್ಲ ಕೂಡಿಸುವ ಪ್ರಸಂಗ ಬರಬಹುದು. ದಯವಿಟ್ಟು ಅಂತಹದಕ್ಕೆ ಅವಕಾಶ ಕೊಡದೇ ತಾವು ಕೆಲಸ ಮಾಡಬೇಕು. ನನ್ನ ಕ್ಷೇತ್ರದ ವಿಚಾರ ಒಂದೇ ಅಲ್ಲ, ಇಡೀ ರಾಜ್ಯದ ಹಾಗೂ ಬೆಂಗಳೂರಿನಲ್ಲಿ ಆಗಿರಬಹುದು. ನನ್ನ ಕ್ಷೇತ್ರದ ವಿಚಾರವನ್ನು ಏತಕ್ಕೆ ಪ್ರಸ್ತಾಪ ಮಾಡಿದೆ ಅಂದರೆ ಅದರ ಬಗ್ಗೆ ಅಂಕಿ ಅಂಶಗಳು ನನ್ನಲ್ಲಿರುವುದರಿಂದ ಮಾತನಾಡಿದ್ದೇನೆ. ಇಡೀ ರಾಜ್ಯ ಬೆಂಗಳೂರಿನ ಪರಿಸ್ಥಿತಿಯಲ್ಲಿರಬಹುದು, ಆದ್ದರಿಂದ ಆದಷ್ಟು ಬೇಗ ಮಂತ್ರಿಗಳು ಬಂದು ಇದನ್ನು ಸರಿಮಾಡಬೇಕೆಂದು ತಮ್ಮಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

೫-೩೦ ಪಿ.ಎಂ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).- ಸನ್ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ವರ್ಷಗಳಿಂದ ಭೀಕರ ಬರಗಾಲಕ್ಕೆ ತುತ್ತಾದಂಥ ರೈತ ಈ ವರ್ಷ ಅತಿವೃಷ್ಟಿಗೆ ತುತ್ತಾಗಿ ಕಷ್ಟದಲ್ಲಿರ ತಕ್ಕಂಥಾದ್ದು ನವಂಗೆಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಯಾವ ರೈತ ಈ ರೀತಿ ಅತಿಯಾದ ಮಳೆಯಿಂದ, ಅತಿವೃಷ್ಟಿಯಿಂದ ಕೊಂದರೆಗೀಡಾದ ಹಾಳಾದ, ಅವನಿಗೆ ತಕ್ಷಣ ಅವನ ಬದುಕನ್ನುಳಿಸುವುದಕ್ಕೋಸ್ಕರ ಯಾವುದೇ ಒಂದು ಕಾರ್ಯಕ್ರಮವನ್ನು ಈ ಸರ್ಕಾರ ಹಾಕಿಕೊಳ್ಳಲಿಲ್ಲ ಒಂದೊಕಡೆ ಹಣಕಾಸಿನ ತೊಂದರೆಯಲ್ಲಿ, ಮಂಗಗ್ವಿನಲ್ಲಿ ಸಿಕ್ಕಿರುವ ಈ ಸರ್ಕಾರ, ಬರಗಾಲದ ಸಂದರ್ಭದಲ್ಲಿ ನಮ್ಮ ಅಪೇಕ್ಷೆಗೆ ತಕ್ಕಂತೆ ರೈತರ ಸಮಸ್ಯೆಗಳನ್ನು ಬಗೆಹರಿಸಲಿಲ್ಲ. ಅದೇರೀತಿ ಅತಿವೃಷ್ಟಿಗೆ ರೈತ ತುತ್ತಾದಂಥ

ಸಂದರ್ಭದಲ್ಲಿ ಸಹ ಅತನ ಅಪೇಕ್ಷೆಗೆ ತಕ್ಕಂತೆ ಬೇಕಾದ ಸವಲತ್ತುಗಳನ್ನು ಕೊಡಲಿಲ್ಲ. ಇಲ್ಲಿ ಕೊಟ್ಟಿರುವಂಥ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಯಾರು ಮಳೆಗೆ ಸಿಕ್ಕಿ ಅತನ ಮನೆ ಹಾಳಾಗಿ ಹೋಗಿದೆ, ಅಂತಹವನಿಗೆ ನೂರುರೂಪಾಯಿಗಳ ಪರಿಹಾರದಂತೆ ೫೯೦ ಸಂಸಾರಗಳಿಗೆ ನಾವು ಕೊಟ್ಟಿದ್ದೇವೆ ಎಂದು ಅಲ್ಲಿ ಪುಟದಲ್ಲಿ ಹೇಳಿದ್ದಾರೆ. ಅಧ್ಯಕ್ಷರೇ, ನನಗೆ ಅರ್ಥವಾಗುತ್ತಿಲ್ಲ. ಏನಾದರೂ ಈ ಸರ್ಕಾರದವರು ಮಳೆಗೆ ಸಿಕ್ಕಿ ಹಾಳಾದಂಥ ರೈತನಿಗೆ ಭಿಕ್ಷೆ ಕೊಡುತ್ತಿದ್ದಾರಾ ? ಮಾನ್ಯ ಮಂತ್ರಿಗಳು ಇಲ್ಲಿದ್ದಾರೆ, ನಾನು ಅವರನ್ನು ಕೇಳುವುದಕ್ಕೆ ಬಯಸುತ್ತೇನೆ. ಈ ನೂರು ರೂಪಾಯಿಗಳನ್ನು ಕೊಡುವುದರಿಂದ ಏನು ಮಾಡುವುದಕ್ಕೆ ಸಾಧ್ಯ ಇದೆ ? ನಿಜ, ಇಂಟರಿಮ್ ರಿಲೀಫ್‌ಗೋಸ್ಕರ ಕೊಡಲೇ ಇಷ್ಟು ಕೊಡುತ್ತಿದ್ದೇವೆ. ಎಂದು ನೀವು ಹೇಳಬಹುದು. ನೂರು ರೂಪಾಯಿಗಳಿಂದ ಏನು ಮಾಡುವುದಕ್ಕೆ ಸಾಧ್ಯ ಇದೆ? ಇದು ಎಂಟು ಹತ್ತು ದಿವಸ ಅತನಿಗೆ ಊಟಕ್ಕೇ ಸಾಕಾಗುವುದಿಲ್ಲ. ಮನೆ ಮೇಲೆ ಎಂಟು-ಹತ್ತು ಹೊಚ್ಚುಗಳು ಒಡೆದು ಹೋದರೆ, ಹಾರಿಹೋಗಿದ್ದರೆ ಅದನ್ನು ತಂದು ಸಾಕುವುದಕ್ಕೆ ಆಗುವುದಿಲ್ಲ ಹುಲ್ಲು ತಂದು ಮೇಲೆ ಮುಚ್ಚುವುದಕ್ಕೂ ಕೂಡ ಇದರಿಂದ ಅತನಿಗೆ ಆಗುವುದಿಲ್ಲ. ಏಕೆ, ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ ಇವತ್ತು ರಾಜ್ಯ ಸರ್ಕಾರ ಈ ರೀತಿ ಭೀಕರ ವಿಕೋಪಕ್ಕೆ ಜನ ತುತ್ತಾದಂಥ ಸಂದರ್ಭದಲ್ಲಿ ಬೇರೆ ಎಲ್ಲಾ ಕೆಲಸಕಾರ್ಯಗಳನ್ನು ಸ್ಥಗಿತಗೊಳಿಸಿ ನಿಜಪಾಡುಂಥ ಬಡವನಿಗೆ ಬೇಕಾದ ಸವಲತ್ತುಗಳನ್ನು ಕೊಡುವಂಥ ತಕ್ಷಣದ ಪರಿಹಾರ ಒದಗಿಸಿಕೊಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿತ್ತು. ಆದರೆ ಅದು ಆಗಲಿಲ್ಲ ನಾನು ಬಿಜಾಪುರ, ಧಾರವಾಡ, ಗುಲ್ಬರ್ಗಾ ಕಡೆ ಹೋಗುವ ಪ್ರಯತ್ನ ಮಾಡಿದೆ. ಬಿಜಾಪುರ ಜಿಲ್ಲೆಯಲ್ಲಿ ಸಹ ಮುಂಗಾರು ಬೆಳೆ ಬರಬೇಕಿತ್ತು. ಯಾರಾದರೂ ೧೦-೧೫ ಚೀಲ ಜೋಳ ಬೆಳೆದಿದ್ದಾರೆಯೇ ಎಂದರೆ, ಅಂತಹ ೧೦-೨೦ ಸಂಸಾರಗಳೂ ಕೂಡ ಸಿಗದೇ ಇರುವಂಥ ದುಸ್ಥಿತಿಗೆ ಅವರು ಸಿಕ್ಕಿದ್ದಾರೆ. ಮುಂಗಾರು ಬೆಳೆ ಹೋಯಿತು. ಹಿಂಗಾರು ಬರುವ ವಿಶ್ವಾಸ ಇಲ್ಲ. ಪುನಃ ಅವರು ಭೂಮಿಯನ್ನು ಹದಮಾಡಿ ತಯಾರು ಮಾಡಬೇಕಾಗುತ್ತದೆ. ನೀವು ಈ ವರ್ಷ ಕೃಷಿ ಇಲಾಖೆಯಿಂದ ಕೊಟ್ಟಂಥ ಬಿತ್ತನೆ ಬೀಜಗಳು ಕಡಿಮೆ ಪ್ರಮಾಣದಲ್ಲಿದ್ದು, ಅವುಗಳಿಂದ ಸರಿಯಾಗಿ ಬೆಳೆ ಬರಲಿಲ್ಲ. ಮಳೆಯೂ ಬರಲಿಲ್ಲ. ಆದರೆ ಜೂನ್, ಜುಲೈ ನಂತರ ಇದ್ದಕ್ಕಿದ್ದಂತೆ ಹೆಚ್ಚು ಮಳೆ ಬಂದಾಗ ನೂರಕ್ಕೆ ತೊಂಬತ್ತರಷ್ಟು ಭಾಗ ಬಿತ್ತನೆ ಬೀಜ ಸಂಪೂರ್ಣವಾಗಿ ನಾಶವಾಯಿತು. ಮತ್ತೆ ಬೀಜ ಕೊಡುವುದರ ಒಳಗೆ ಬಿತ್ತನೆ ಕಾಲ ಮುಗಿದು ಹೋಯಿತು. ಈ ರೀತಿ ರಾಜ್ಯದ ರೈತ ಕಂಗಾಲಾಗಿರುವಂಥ ವಿಚಿತ್ರವಾದ ಸನ್ನಿವೇಶ ಇದೆ. ನಾನು ಈ ಸರ್ಕಾರದ ಬಗ್ಗೆ ಅಪೇಕ್ಷೆ ಪಟ್ಟಿದ್ದೆ. ಏನೆಂದರೆ ಇನ್ನಾದರೂ ಸಮಸ್ಯೆಗಳನ್ನು ಶಾಶ್ವತವಾಗಿ ಪರಿಹಾರವನ್ನು ಕಂಡು ಹಿಡಿಯುವ ಪ್ರಯತ್ನ ಮಾಡುತ್ತಾರೆ ಎಂದು ಏಕೆಂದರೆ ಒರಗಾಲಕ್ಕೆ ತುತ್ತಾದಂಥ ಸಮಯದಲ್ಲಿ ತೆಗೆದುಕೊಳ್ಳುವ ಕಾರ್ಯಕ್ರಮ ಬೇರೆ. ಹಾಗೆಯೇ ಅತಿವೃಷ್ಟಿಗೆ ಅನಾವೃಷ್ಟಿಗೆ ತುತ್ತಾದಂಥ ಸಂದರ್ಭದಲ್ಲಿ ನೀವು ಬೇರೆಯೇ ಒಂದು ಕಾರ್ಯಕ್ರಮವನ್ನು ಪಾಲಿಕೊಳ್ಳಬಹುದಿತ್ತು. ಕರ್ನಾಟಕ ರಾಜ್ಯದಲ್ಲಿ ಒಂದು ದೊಡ್ಡ ಜ್ವಲಂತ ಸಮಸ್ಯೆ ಎಂದರೆ ಇಡೀ ರಾಜ್ಯದಲ್ಲಿ ಯಾವ ಮಿಷ್ಟು ಬೆಳೆ ಬೆಳೆದಿದ್ದೇವೆಯೋ ಬರಗಾಲಕ್ಕೆ ತುತ್ತಾದಂಥ ಸಂದರ್ಭದಲ್ಲಿ ಇದ್ದಂಥ ಪ್ರಮಾಣ ಕೂಡ ಈಗ ನಮಗೆ ಬರುವುದಿಲ್ಲ ಬಹುಶಃ ಈ ಬಗ್ಗೆ ಸರ್ವೆ ಮಾಡಿಸಿದ್ದರೆ ಇಲ್ಲವೇ ಕೃಷಿ ಇಲಾಖೆಯಿಂದ ರಿಪೋರ್ಟ್ ಬಂದರೆ ಗೊತ್ತಾಗಬಹುದೆಂದು ಕಾಣುತ್ತದೆ. ಈ ವರ್ಷ ಭತ್ತದ ಬೆಳೆ ಚೆನ್ನಾಗಿ ಆಗಿದೆ. ಇವತ್ತು ಒಂದು ಕ್ವಿಂಟಾಲ್‌ಗೆ ೨೨೫ ರಿಂದ ೨೫೦ ರೂಪಾಯಿ ಬೆಲೆ ಇದೆ. ಆದರೆ ಯಾವರೀತಿ ರೈತ ಹಾಳಾಗಿ ಹೋಗುತ್ತಿದ್ದಾನೆ ಎಂದರೆ ಒಳ್ಳೆಬೆಳೆ ಬರುತ್ತಿದ್ದರೂ ಸಹ ಇನ್ನೊಂದು ತಿಂಗಳಿಗೆ ಕೊಯ್ಲಾಗಿ ಮನೆಗೆ ಬಂದರೆ ಎಷ್ಟು ಸಿಗುತ್ತದೆ ? ಇವತ್ತು ಕ್ವಿಂಟಾಲ್ ೧೭೫ ರಿಂದ ೧೮೦ ರೂಪಾಯಿ ಬರುವ ನಂಬಿಕೆಯೂ ಇಲ್ಲ. ಅಂದರೆ ಸುಮಾರು ಒಂದು ಕ್ವಿಂಟಾಲ್‌ಗೆ ೧೦೦-೧೨೫ ರೂಪಾಯಿ ಭತ್ತದ ಬೆಲೆ ಒಂದು ತಿಂಗಳಲ್ಲಿ ವ್ಯತ್ಯಾಸವಾಗುತ್ತದೆ. ಆದಕ್ಕೋಸ್ಕರ ಮನೆ ಬಿದ್ದವನಿಗೆ ಮನೆ ಕಟ್ಟಿಸಿಕೊಡತಕ್ಕ ಥರಾದ್ದು. ಕೆರೆಕಟ್ಟೆಗಳು ತುಂಬಿ ಹರಿಯುತ್ತಿವೆ. ಮತ್ತೆ ಡ್ಯಾಮೇಜ್ ಆದರೆ ತತ್‌ಕ್ಷಣ ರಿಲೀಫ್ ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದಷ್ಟು ಹಣ ತೆಗೆದಿಡುವಂಥಾದ್ದು. ಈ ರೀತಿ ಒಳ್ಳೆ ಬೆಳೆಯಾದಾಗ ಬೆಂಬಲ ಬೆಲೆಯನ್ನು ಕೊಟ್ಟು ಅತನನ್ನು ಉಳಿಸಲಿಕ್ಕೆ ಸಹ ಸೂಕ್ತ ಕಾರ್ಯಕ್ರಮ ಪಾಲಿಕೊಳ್ಳಬೇಕಾಗುತ್ತದೆ. ೩೫೦ ರೂಪಾಯಿ ಕ್ವಿಂಟಾಲ್‌ಗೆ ಇದ್ದದ್ದು ನಾಳೆ ೧೭೫ ಆದರೆ, ಸುಮಾರು ೧೫೮-೧೭೦ ರೂಪಾಯಿ ಬೆಲೆ ಕಡಿಮೆಯಾದರೆ ರೈತ ಹೇಗೆ ಬದುಕುವುದಕ್ಕೆ ಸಾಧ್ಯವಾಗುತ್ತದೆ ? ಅವನು ಹ್ಯಾಗೆ ತನ್ನ ಕಾಲಮೇಲೆ ತಾನು ನಿಲ್ಲುವುದಕ್ಕೆ ಸಾಧ್ಯವಾಗುತ್ತದೆ ? ಆದ್ದರಿಂದ ನಾನು ಸನ್ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ರೀತಿ

ಪರಿಹಾರ ಕೊಡುವಂಥ ಸಂದರ್ಭದಲ್ಲಿ ಕೇವಲ ಕೆರಕಟ್ಟಿಗಳ ರಿಪೇರಿಯ ಅಗತ್ಯವಿದೆ, ಮನೆ ಇಲ್ಲದವರಿಗೆ ಹೊಸ ಮನೆ ಕಟ್ಟಿಸಿಕೊಡಬೇಕಾಗುತ್ತದೆ.

ಇವತ್ತು ಸಾವಿರಾರು ಮನೆಗಳನ್ನು ಕಳೆದುಕೊಂಡು ಹೋಗಿರುವಂಥ ಜನರು ಒಂದೊಂದು ಜಿಲ್ಲೆಯಲ್ಲೂ ಬೀದಿ ಪಾಲಾಗಿರುತ್ತಾರೆ. ನೀವು ಕೊಟ್ಟಂಥ ಒಂದು ನೂರು ರೂಪಾಯಿನಲ್ಲಿ ಏನೂ ಮಾಡುವುದಕ್ಕೂ ಸಾಧ್ಯವಿಲ್ಲ. ಅವನು ಬೀದಿಯಲ್ಲಿ ಬಿದ್ದಿದ್ದಾನೆ, ಈ ರೀತಿ ಜನ ಕಂಗಾಲಾಗಿರುವಂಥ ಸಂದರ್ಭದಲ್ಲಿ ರಕ್ಷಣೆ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಈ ಸರ್ಕಾರದಲ್ಲಿ ಆಗಿಲ್ಲ. ಆವರದೇ ಆದ ಗೊಂದಲದ ಹಾಥೆ ಇಡೀ ರಾಜ್ಯದಲ್ಲಿ ಏನಾಗಿದೆ ಎಂದು ತಿಳಿದುಕೊಳ್ಳುವುದಕ್ಕೂ ಸಮಯವಿಲ್ಲ. ಬಿಜಾಪುರ, ಗುಲ್ಬರ್ಗಾ ಬೇಡ ಬೆಂಗಳೂರು ಮಹಾನಗರದಲ್ಲಿಯೇ ಎಂದು ಕಾಣದ, ಕಳೆದ ನೂರಾರು ವರ್ಷಗಳಲ್ಲಿ ಕಾಣದೇ ಇದ್ದ ದೊಡ್ಡ ಅನಾಹುತ ಈ ಮಳೆಯಿಂದ ಏನಾಯಿತು, ಇಡೀ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಆಯಿತೇ ? ರಾಜ್ಯದ ಯಾವುದೇ ಊರುಗಳಿಗೆ ಹೋಗಿ ನೋಡಿ, ಪ್ರತಿಯೊಂದು ಊರುಗಳಲ್ಲಿಯೂ ರಸ್ತೆಯ ಎರಡೂ ಭಾಗಗಳಲ್ಲೂ ಒಂದೊಂದರೆ, ಎರಡು ಆಡಿ ಗುಂಡಿಗಳು ಬಿದ್ದಿವೆ, ಆ ಗುಂಡಿಗಳನ್ನು ಮುಚ್ಚುವುದಕ್ಕೆ ಇವತ್ತು ನಿಮಗೆ ಸಾಧ್ಯ ಆಗಿಲ್ಲ. ಒಂದು ಕಡೆ ಮಳೆ ಬಿದ್ದು ಕೆರೆ ಕಟ್ಟೆ ತುಂಬಿ, ಒಳ್ಳೆಯ ವಿದ್ಯುತ್ ಉತ್ಪಾದನೆ ಬರುತ್ತದೆ ಎಂಬ ಸಂತೋಷಪಡುವಂಥ ಕಾಲದಲ್ಲಿ ಇನ್ನೊಂದು ಕಡೆ ಸಂಪೂರ್ಣವಾಗಿ ರೈತ ಕಂಗಾಲಾಗಿ ಹಾಳಾಗಿ ಹೋಗುತ್ತಿದ್ದಾನೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ತಾವು ರಿಲೀಫ್ ಕೇಳಿದ್ದೀರಿ, ಈ ರಾಜ್ಯದಲ್ಲಿ ಮಳೆಯಿಂದ ಏನು ಅನಾಹುತವಾಯಿತು ಅದರ ವರದಿಯನ್ನು ಕಳುಹಿಸುವುದೂ ಕೂಡ ತುಂಬಾ ನಿಧಾನವಾಯಿತು ಎಂದು ನಾನು ಅಂದುಕೊಂಡಿದ್ದೇನೆ. ತಕ್ಷಣ ವರದಿಯನ್ನು ಕಳುಹಿಸಿ, ತಾತ್ಕಾಲಿಕ ಪರಿಹಾರ ಕಾರ್ಯಾಚರಣೆಯನ್ನು ಕೈಗೊಳ್ಳಿ ಎಂದು ಕೇಂದ್ರಕ್ಕೆ ಆಗ್ರಹ ಮಾಡಿ, ಸಂಬಂಧಪಟ್ಟ ಮಂತ್ರಿಗಳು ಹಾಗೂ ಪ್ರಧಾನಿಗಳ ಜೊತೆಗೆ ಮುಖ್ಯಮಂತ್ರಿಗಳು ಭೇಟಿ ಮಾಡಿ, ಹಣವನ್ನು ತಂದು ಹಂಚುವಂಥ ಪ್ರಾಮಾಣಿಕ ಪ್ರಯತ್ನ ಆಗಿದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಬೇಕು. ಈಗ ವಿಧಾನ ಸಭೆ ಕರೆದು ಕಾರ್ಯಕಲಾಪಗಳನ್ನು ಚರ್ಚೆ ಮಾಡುತ್ತಿದ್ದೇವೆ ಈ ರಾಜ್ಯದ ಜನತೆಯ ಜ್ವಲಂತ ಸಮಸ್ಯೆಗಳು ಏನಿವೆ ಅವುಗಳ ಚರ್ಚೆಗೆ ನಾವು ಸೇರಿದ್ದೇವೆ ಇಂತಹ ಸಂದರ್ಭದಲ್ಲಿ ಎಂದೂ ಕಾಣದ ಮಳೆಯಿಂದ ಅತಿವೃಷ್ಟಿಗೆ ತುತ್ತಾಗಿರುವಂಥ ರೈತನ ಬಗ್ಗೆ, ಜನತೆಯ ಬಗ್ಗೆ ಚರ್ಚೆಯಾಗಬೇಕು. ಅದೇರೀತಿ ಯಾರು ಆನ್ ಆಥರೈಸ್ಡ್ ಕಲ್ಟಿವೇಷನ್ ಮಾಡಿದ್ದಾರೆ ಅವರ ಬಗ್ಗೆ, ಆ ಬಡಪಾರ ಬಗ್ಗೆ ನೀವು ಸಂಗ್ರೀವಾಜ್ಞೆ ತಂದಿದ್ದೀರಿ ಅದರ ಬಗ್ಗೆಯೂ ಚರ್ಚೆಯಾಗಬೇಕು. ಆದಕ್ಕಾಗಿ ವಿಶೇಷ ಅಧಿವೇಶನ ಕರೆಯಿರಿ ಎಂದು ಆಗ್ರಹ ಮಾಡಿದಾಗ ತಾವು ಸಭೆ ಕರೆದಿದ್ದೀರಿ ಆವರೆ ಇದೇ ಅಧಿವೇಶನ ಮುಂಗಿಸಿ, ಮನೆಗೆ ಏಕೆ ಹೋಗಬೇಕು ? ಮುಖ್ಯವಾದ ಸಮಸ್ಯೆಗಳನ್ನು ಚರ್ಚೆ ಮಾಡುವುದು ಬೇಕಾದಷ್ಟಿದೆ. ನಿಜ, ಎಲ್ಲರೂ ಕುಳಿತು ಅಧಿವೇಶನದ ಅವಧಿಯನ್ನು ನಿಗದಿ ಮಾಡಿದ್ದೇವೆ. ಆದರೆ ಅನೇಕ ಪ್ರಮುಖವಾದ ವಿಚಾರಗಳು ಬಂದಿವೆ, ಅವುಗಳ ಚರ್ಚೆ ಮಾಡಬೇಕು, ಅವುಗಳಿಗೆ ಪರಿಹಾರ ಹುಡುಕಬೇಕು. ನೀವು ಇನ್ನು ಮುಂದೆ ಒಜೆಟ್ ಅಧಿವೇಶನವನ್ನೇ ಕರೆಯಬಹುದು. ಈ ರಾಜ್ಯದ ರೈತ ಹಾಳಾಗಿ ಹೋಗಿದ್ದಾನೆ, ಪ್ರಕೃತಿ ವಿಕೋಪಕ್ಕೆ ಸಿಕ್ಕಿ ಹಾಳಾಗಿ ಹೋಗಿದ್ದಾನೆ, ತಾಲ್ಲೂಕಿನಲ್ಲಿ, ಜಿಲ್ಲೆಯಲ್ಲಿ ಹಾಗೂ ಇಡೀ ರಾಜ್ಯದಲ್ಲಿ ಏನಾಗಿದೆ ಎಂಬ ಬಗ್ಗೆ ಅಂಕಿ ಅಂಶ ಕೊಟ್ಟು ಬೇಳುವುದಕ್ಕೂ ಸಮಯವಿಲ್ಲ. ಇಂತಹ ವಿಚಿತ್ರವಾದ ಸನ್ನಿವೇಶ ತಂದಿಟ್ಟು, ಕೊನೆಯ ಘಳಿಗೆಯಲ್ಲಿ ಇಲ್ಲಿಂತಕ್ಕೆ ಶಾಸಕರೆಲ್ಲರೂ ಊರಿಗೆ ಹೋಗುವಂಥ ಸಂದರ್ಭದಲ್ಲಿ ಈ ದೊಡ್ಡ ಸಮಸ್ಯೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಯತ್ನ ಮಾಡಿರುವುದು ಈ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಕೋಭೆ ತರುತ್ತದೋ ನನಗೆ ಅರ್ಥವಾಗುವುದಿಲ್ಲ. ಇದುವರೆಗೆ ತಾವು ಈ ರೀತಿ ಪ್ರಕೃತಿ ವಿಕೋಪಕ್ಕೆ ತುತ್ತಾಗಿರತಕ್ಕ ಬಡ ಜನತೆಗೆ ಯಾವುದೇ ಸಮಲತ್ತನ್ನು, ಹಣಕಾಸಿನ ಮಂಗ್ಗಟ್ಟಿನಿಂದ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಕೇಂದ್ರ ಸರ್ಕಾರದಿಂದ ಬರುವಂಥ ಹಣವನ್ನು ಕಾಯ್ದುಕೊಂಡು ಕುಳಿತು ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮ್ಮ ಬೊಕ್ಕಸದಿಂದ ಆಗಿರುವ ಅನಾಹುತಕ್ಕೆ ತಕ್ಕಂಥ ರೀತಿಯಲ್ಲಿ ಹಣವನ್ನು ಖರ್ಚು ಮಾಡಬೇಕು. ಒಂದೊಂದು ಜಿಲ್ಲೆಗೆ ೧-೨ ಲಕ್ಷ ಭಿಕ್ಷೆ ಕೊಟ್ಟು ಸಾಧನೆ ಮಾಡುತ್ತಿದ್ದೇವೆ ಎಂದು ಹೇಳಿಕೊಂಡು, ಪರಿಹಾರ ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುವುದು ನಿಮ್ಮ ಸರ್ಕಾರಕ್ಕೆ ಶೋಭೆ ತರುವುದಿಲ್ಲ. ಈಗಲಾದರೂ ಕೇಂದ್ರಸರ್ಕಾರದ ದುಡ್ಡು ಕೊಡುವವರೆಗೆ ಕಾಯದೇ, ತಕ್ಷಣ ಸ್ವಲ್ಪ ಹಣಕಾಸು ತೆಗೆದಿಟ್ಟು, ಜಿಲ್ಲಾ ಕೇಂದ್ರಗಳಿಗೆ ಕಳುಹಿಸಿಕೊಟ್ಟು, ಜಿಲ್ಲಾಧಿಕಾರಿಗಳ ಮೂಲಕ ಹಂಚುವಂತೆ ವ್ಯವಸ್ಥೆ ಮಾಡಬೇಕು. ಕೊನೆಯದಾಗಿ, ಇಲಾಖೆಗಳಿಗೆ

ಸಂಬಂಧಪಟ್ಟಂತೆ ಮಂತ್ರಿಗಳು ಇದ್ದರೆ, ಅವರು ನೋಡಿಕೊಳ್ಳುತ್ತಿದ್ದರು. ಸನ್ಮಾನ್ಯ ದೇಶಪಾಂಡೆಯವರಿಗೆ ಕಳಕಳಿ ಇದೆ, ಆದರೆ ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ತರುತ್ತಾರೋ ನನಗೆ ಗೊತ್ತಿಲ್ಲ. ಅತಿವೃಷ್ಟಿಗೆ ಸಂಬಂಧಪಡದೇ ಇದ್ದರೂ ಸಹ ರೈತ ಒಳ್ಳೆಯ ಭತ್ತವನ್ನು ಬೆಳೆಯುತ್ತಿದ್ದಾನೆ, ೬ ತಿಂಗಳು ಶ್ರಮವಹಿಸಿ, ಫಸಲು ತಮ್ಮ ಮನೆಗೆ ಬರುತ್ತಾ ಇದೆ, ಒಳ್ಳೆಯ ಬೆಲೆ ಸಿಗುತ್ತದೆ ಎನ್ನುವ ಸಮಯದಲ್ಲಿ ಆತನಿಗೆ ೧೬೫ ರೂಪಾಯಿ ರೇಟ್ ಕೂಡ ಸಿಗುವುದಿಲ್ಲ. ಆತನ ಬೆವರಿನ ಬೆಲೆಗೆ ಸರಿಯಾದ ಬೆಲೆ ಸಿಕ್ಕುವುದಿಲ್ಲ. ಆದ್ದರಿಂದ ಈಗಲಾದರೂ ಸರ್ಕಾರ ಬೆಂಬಲ ಬೆಲೆಯನ್ನು ಘೋಷಣೆ ಮಾಡಿ, ಬಹಿರಂಗ ಮಾರುಕಟ್ಟೆಯಲ್ಲಿ ೨೫೦ ರೂಪಾಯಿಗೆ ಒಂದು ಕ್ವಿಂಟಾಲ್‌ನಂತೆ ಕೊಂಡುಕೊಳ್ಳುವಂತೆ ವ್ಯವಸ್ಥೆ ಮಾಡಬೇಕು. ಇದರಿಂದ ವ್ಯಾಪಾರಸ್ಥರಿಂದ ಬಡವರು ಶೋಷಣೆ ಮಾಡುವಂಥ ಪ್ರಯತ್ನ ಆಗುವುದಿಲ್ಲ. ಬೆಂಬಲ ಬೆಲೆ ನಿಗದಿ ಮಾಡಿ,ಸ್ಟೇಗೋಡೌನ್‌ಗಳಲ್ಲಿ ಖರೀದಿ ಮಾಡುವಂಥ ವ್ಯವಸ್ಥೆ ಮಾಡಬೇಕು. ಆಗ ರೈತ ಬೆಳೆದಂಥ ಬೆಲೆಗೆ ಬೆಲೆ ಕಡಿಮೆಯಾಗುವುದಿಲ್ಲ. ಆವನ ಕಾಲ ಮೇಲೆ, ಅವನು ನಿಂತು, ಸರ್ಕಾರದ ಕಡೆ ಭಿಕ್ಷೆ ಕೇಳದೆ ನೆಮ್ಮದಿಯಿಂದ ಜೀವನ ಮಾಡುತ್ತಾನೆ. ಆದಷ್ಟು ಬೇಗ ಈ ಒಂದು ತೊಂದರೆಗೆ ಒಳಗಾಗಿರುವಂಥ ಬಡವರಿಗೆ ಪರಿಹಾರವನ್ನು ಒದಗಿಸುವ ಕಾರ್ಯ ಆಗಬೇಕೆಂದು ಆಗ್ರಹ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ (ಗುರುಮಿಟಕಲ್).—ಮಾನ್ಯ ಅಧ್ಯಕ್ಷರೇ, ಇವತ್ತು ನಿಜವಾಗಲೂ ನಮ್ಮ ಯಡಿಯೂರಪ್ಪನವರು ಹೇಳಿದ ಹಾಗೆ ಅನೇಕ ಮಹತ್ವವಾದ ಸಮಸ್ಯೆಗಳು ಇವೆ. ಈ ಸಮಸ್ಯೆಗಳ ಮೇಲೆ ಚರ್ಚೆ ಮಾಡಬೇಕೆಂದು ನಾವು ಅವುಗಳನ್ನು ತೆಗೆದುಕೊಂಡಿದ್ದೇವೆ. ಆದರೆ ಸಮಯದ ಕೊರತೆ ಇದ್ದ ಕಾರಣ ನಾವು ಯಾವ ಸಮಸ್ಯೆಗೂ ಪರಿಹಾರ ಸೂಚಿಸುವುದಕ್ಕೂ ಕೂಡಾ ಆಗುವುದಿಲ್ಲ, ಅವರಿಂದ ಉತ್ತರ ಸರಿಯಾಗಿ ಬರುತ್ತದೆ ಎಂದು ನನಗೆ ನಿರೀಕ್ಷಣೆ ಏನೂ ಇಲ್ಲ. ಕಾರಣ ಸಮಯದ ಕೊರತೆ. ಈ ಒಂದು ಫ್ಲಡ್ ಹೆವಾಕ್‌ನಿಂದ ಇಡೀ ರಾಜ್ಯದಲ್ಲಿ ಜನರು ಏನು ತೊಂದರೆಗೆ ಈಡಾಗಿದ್ದಾರೆ, ಅದರಲ್ಲೂ ವಿಶೇಷವಾಗಿ ರೈತರ ಬಗ್ಗೆ ವಿಚಾರ ಮಾಡಬೇಕೆಂದರೆ ಕೇವಲ ಒಂದು ತಾಸಿನಲ್ಲಿ ಎಲ್ಲರೂ ಮಾತನಾಡಿ ಮುಗಿಸಬೇಕೆಂದರೆ ಅಷ್ಟು ಸಮಂಜಸವಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಇವತ್ತು ಪೇಪರ್ ನೋಡಿದಮೇಲೆ ನನಗೆ ನೋವಾಯಿತು. ಈ ಒಂದು ಅತಿವೃಷ್ಟಿಗೆ ಸಿಕ್ಕಿದಂಥ ರೈತರ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಮಂತ್ರಿಮಂಡಲ ವಿಸ್ತರಣೆ ಮಾಡುವ ಬಗ್ಗೆ ಜಿಲ್ಲಾ ಶಾಸಕರನ್ನು ಕರೆಸಿಕೊಂಡು ಸಭೆ ಮಾಡುವಂತಹ ಸಂದರ್ಭವಿದೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ.—ಇಂತಹ ಒಂದು ಗಹನವಾದ ವಿಷಯದ ಬಗ್ಗೆ ಚರ್ಚೆ ಮಾಡುವಾಗ ನಿಜವಾಗಲೂ ನಾನು ಮಂತ್ರಿ ಇದ್ದಾಗಲೂ ನೋಡಿದ್ದೇನೆ, ಎಂ.ಎಲ್.ಎ. ಇದ್ದಾಗಲೂ ನೋಡಿದ್ದೇನೆ, ಈ ಸದನದಲ್ಲಿ ಯಾವಾಗಲೂ ಬರಗಾಲದ ಮೇಲೆ ಚರ್ಚೆ ಆಗುವಾಗ, ಫ್ಲಡ್ ಮೇಲೆ ಚರ್ಚೆ ಆಗುವಾಗ, ಸರಕಾರದ ಮುಖ್ಯವಾದಂಥ ಮಂತ್ರಿಗಳು ಹಾಜರಿರುತ್ತಿದ್ದರು. ಹಾಜರಿರಲೇಬೇಕು ಅದು ಅವರ ಕರ್ತವ್ಯ. ಡ್ರಾಟ್ ಮೇಲಾಗಲೀ ಫ್ಲಡ್ ಮೇಲಾಗಲೀ ಚರ್ಚೆ ಆಗುವಾಗ ಅಗ್ರಿಕಲ್ಚರಲ್ ಹಸ್ಬೆಂಡ್ರಿ ಡಿಪಾರ್ಟ್‌ಮೆಂಟ್ ರೂರಲ್ ಡೆವೆಲಪ್‌ಮೆಂಟ್ ಅಂಡ್ ಪಂಚಾಯತ್ ರಾಜ್ ಡಿಪಾರ್ಟ್‌ಮೆಂಟ್, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್. ಪಿ.ಡಬ್ಲ್ಯು.ಡಿ.ಯವರು ಬಂದು ಕುಳಿತುಕೊಂಡು they should listen to the Members want they say. This is very important. ಇದು ಯಾವಾಗಲೂ ಇದ್ದಂಥ ಪದ್ಧತಿ ಮುಖ್ಯ ಆಫೀಸರ್ಸ್ ಗ್ಯಾಲರಿಯಲ್ಲಿ ಕೂಡಾ ಈ ಖಾತೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಬಂದು ಕುಳಿತು ಸದಸ್ಯರು ಹೇಳತಕ್ಕಂಥಾದ್ದನ್ನು ನೋಟ್ ಮಾಡಿಕೊಳ್ಳುತ್ತಿದ್ದರು ಸಂಬಂಧಪಟ್ಟ ಮಂತ್ರಿಗಳಿಂದ ಸವಿಸ್ತಾರವಾದ ಉತ್ತರ ಕೂಡಾ ದೊರಕುತ್ತಿತ್ತು. ಇದನ್ನು ನಾನು ಆಗ ನಿಜವಾಗಲೂ ನೋಡಿದ್ದೇನೆ ರೆವಿನ್ಯೂ ಡಿಪಾರ್ಟ್‌ಮೆಂಟ್ ಇದರ ಸಂಪೂರ್ಣವಾದ ಹೊಣೆಗಾರಿಕೆ ಹೊತ್ತಿದ್ದರೂ ಕೂಡಾ, ಉಳಿದಂಥ ಮಂತ್ರಿಗಳು ಮಂತ್ರ ಅಧಿಕಾರಿಗಳು ಸಪ್ಲೋರ್ಟ್ ಮಾಡುತ್ತಿದ್ದರು ಏನು ವಿಷಯ ಕೇಳುತ್ತಾರೆ, ಏನು ಉತ್ತರ ಕೊಡುತ್ತಾರೆ ಎಂದು ನೋಡುತ್ತಿದ್ದರು. ಆದರೆ ದುರ್ದೈವದಿಂದ ಇವತ್ತು ಒಬ್ಬರೂ ಕೂಡಾ ಇಲ್ಲ ಮುಖ್ಯಮಂತ್ರಿಗಳೂ ಕೂಡಾ ಇಲ್ಲ. ಕೆಲಸಗಳ ಬಗ್ಗೆ ವಿಶೇಷವಾದ ಚರ್ಚೆ ತೆಗೆದುಕೊಂಡಾಗಲೂ ಕೂಡಾ ಬಂದರುಗಳ ಬಗ್ಗೆ ಡಿಸ್ಕಸ್ ಆಗುವಾಗ ಕೂಡಾ ಇಲ್ಲ. ಅವರಿಗೆ ಸಂಬಂಧಪಟ್ಟ ವಿಚಾರಗಳು ಚರ್ಚೆ ಆಗುವಾಗಲೂ ಕೂಡಾ ಅವರು ಇಲ್ಲ. ಆಮೇಲೆ ಮಾನ್ಯ ಧರ್ಮಸಿಂಗ್‌ರವರು ಪ್ರವಾಹದಿಂದ

ಉಂಟಾದ ಡ್ಯಾಮೇಜಸ್‌ಗಳ ಬಗ್ಗೆ ಕಾಲಿಂಗ್ ಅಟೆನ್‌ಷನ್ ಪಾಕಿದಾಗಲೂ ಕೂಡಾ ಅವರು ಇಲ್ಲ. ೯ ಕಾಲಿಂಗ್ ಅಟೆನ್‌ಷನ್ ಅದವು ಅನೇಕ ವಿಷಯಗಳು ನೇರವಾಗಿ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟವಾಗಿದ್ದವು, ಆದರೂ ಕೂಡಾ ಇವತ್ತು ಅವರು ಸಭೆಯಲ್ಲಿ ಇರಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ (ನಗರಾಭಿವೃದ್ಧಿ ಸಚಿವರು).—ಅಧ್ಯಕ್ಷರೇ, ಇವತ್ತು ಕೌನ್ಸಿಲ್‌ನಲ್ಲಿ ಸಾಧಾರಣ ೩೮-೩೮ ಕಾಲಿಂಗ್ ಅಟೆನ್‌ಷನ್‌ಗಳು, ೫೧ನೇ ನಿಯಮದ ವಿಚಾರಗಳೂ ಚರ್ಚೆಗೆ ಬಂದಿವೆ ಇಲ್ಲೂ ಕೂಡಾ ೧೪-೧೫ ಕಾಲಿಂಗ್ ಅಟೆನ್‌ಷನ್‌ಗಳು ಇವೆ. ಬಿಲ್‌ಗಳು ಇಲ್ಲೂ ಇವೆ, ಅಲ್ಲೂ ಇವೆ. ಅದೇ ಪ್ರಕಾರವಾಗಿ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಬಿಲ್ ಇದ್ದು, ಮಾನ್ಯ ಮುಖ್ಯಮಂತ್ರಿಗಳು ಕೌನ್ಸಿಲ್‌ನಲ್ಲಿ ಇದ್ದಾರೆ. ಈತನಕ ಅವರು ಅಲ್ಲೇ ಇದ್ದರು. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಇವತ್ತು ಏಷ್ಟು ಬಿಸಿನೆಸ್ ಮಾಡುವುದಕ್ಕೆ ಸಾಧ್ಯವೋ ಅಷ್ಟೂ ಮಾಡುತ್ತಿದ್ದೇವೆ. ಎಲ್ಲ ಮಂತ್ರಿಗಳು ಸಹ ಇರಬೇಕೆಂ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

SRI M. MALLIKARJUNA KHARGE.—To prepare this memorandum you have got information from the Animal Husbandry, Forest and Revenue Department, Agriculture Department. They send a report, they consolidate the date and you send the memorandum. Is it not? When we are discussing important subject other Ministers should also present. What type of answer is this? ನಾವು ಏನಾದರೂ ಹೇಳುವಾಗ ಅಂದರೆ ಕಬ್ಬಿನ ಬಗ್ಗೆ, ರಸ್ತೆಗಳ ಬಗ್ಗೆ ನೀರಾವರಿ ಬಗ್ಗೆ ಮಾತನಾಡುವಾಗ ಆಯಾಯ ಡಿಪಾರ್ಟ್‌ಮೆಂಟ್ಸ್ ಆಫೀಸರ್ಸ್ ಮತ್ತು ಸಂಬಂಧಪಟ್ಟ ಮಂತ್ರಿಗಳು ಇರಬೇಕಾಗುತ್ತದೆ. ಇದಕ್ಕಿಂತ ಬೇರೇನು ಕೆಲಸ ಅವರಿಗೆ ಇದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸದನ ನಡೆಯುತ್ತಿರುವಾಗ ಜಿಲ್ಲಾವಾರು ಶಾಸಕರ ಸಭೆಯನ್ನು ಕರೆದಿದ್ದಾರೆ. ಅವರೆಲ್ಲಾ ಈಗ ಅಲ್ಲಿದ್ದಾರೆ. ಅವರಿಗೆ ಸದನ ಏತಕ್ಕೆ ಬೇಕು ? ಸದನದಲ್ಲಿ ವಿರೋಧಪಕ್ಷದವರು ಮಾತ್ರ ಇರಬೇಕೇನು? ನಾವು ಇಲ್ಲಿ ಯಾರಿಗೋಸ್ಕರ ಭಾಷಣ ಮಾಡಬೇಕು. ಇದೇನು ನನಗೆ ಅರ್ಥವಾಗುವುದಿಲ್ಲ ಈ ತರಹ ಆದರೆ ಹೇಗೆ ?

ಶ್ರೀ ಎಂ. ವೀರಪ್ಪಮೊಯ್ಲಿ.—ಯಾರಿಗಾಗಿ ಈ ಸದನ ?

ಉಪಾಧ್ಯಕ್ಷರು.—ಆಯಿತು ಕರೆಸೋಣ ನೀವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿ ನಾವು ನಾಲ್ಕು ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ವಿಷಯ ಮಾತನಾಡುತ್ತೇವೆ. ಒಬ್ಬರು ಮಂತ್ರಿಗಳು ಇದ್ದರೆ ಸಾಕೇ ? We are all responsible people. ಸರ್ಕಾರದಲ್ಲಿ ೧೫ ಜನ ಮಂತ್ರಿಗಳಿದ್ದಾರೆ ಮೇಲ್ಮನೆಯಲ್ಲಿ ೭ ಜನ ಮಂತ್ರಿಗಳು ಇರಲಿ ಇಲ್ಲಿ ೭ ಜನ ಮಂತ್ರಿಗಳು ಇರಲಿ ಮಾನ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸದನದಲ್ಲಿದ್ದಾರೆ ನಾವು ಹೇಳಿದ್ದನ್ನು ನೋಟ್ ಮಾಡಿಕೊಂಡು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. They will take action quickly. ತಾವೀಗ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿದ್ದೀರಿ ಕೆಲವೊಂದು ಆಫೀಸ್‌ಗಳು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬರುತ್ತವೆ. ಆದರ ಜೊತೆಗೆ ಇನ್ನು ಕೆಲವು ಸಮಸ್ಯೆಗಳನ್ನು ನಾವು ಇಲ್ಲಿ ಬಂದು ಹೇಳುತ್ತೇವೆ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದ್ದರೆ ಆಗ ಉತ್ತರ ಹೇಳಬಹುದು ಈಗ ಮಾನ್ಯ ಮಂತ್ರಿಗಳನ್ನು ನಾನೊಂದು ಮಾತು ಕೇಳುತ್ತೇನೆ. ಎಷ್ಟು ಜಾನುವಾರುಗಳು ಸತ್ತಿವೆ ? ಎಷ್ಟು ನಷ್ಟವಾಗಿದೆ ಎಂದರೆ ಅವರಿಗೇನು ಗೊತ್ತು ? ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಅಧಿಕಾರಿಗಳು ಇದ್ದರೆ ಅದಕ್ಕೆ ಅವರು ಉತ್ತರ ಕೊಡಬಹುದು. ಈ ರೀತಿ ಅನೇಕ ಸಮಸ್ಯೆಗಳು ಬರುತ್ತವೆ. ನಾವೇನೇ ಮಾತನಾಡಿದರೂ ಈಗ ಅದಕ್ಕೆ ಸರಿಯಾದ ಉತ್ತರ ಬರುವುದಿಲ್ಲ ಆದ್ದರಿಂದ ಅಧ್ಯಕ್ಷರೇ, ನೀವು ಅವರಿಗೆ ಹೇಳಬೇಕಾಗುತ್ತದೆ. ನೀವು ಹೇಳದಿದ್ದರೆ ಹೇಗೆ ? Really it is a very collective responsibility. This is unfair, unjust, such an attitude should not be there. I condemn it. You should be fair enough. Atleast we expect that the concerned Mini-

sters should be present. ಇವತ್ತು ಕೊನೆಯ ದಿವಸ ಇವತ್ತಿನ ಕಾರ್ಯಕ್ರಮದ ಪಟ್ಟಿಯಲ್ಲಿ ಸುಮಾರು ೨೦ ವಿಷಯಗಳನ್ನು ಸೇರಿಸಿದ್ದಾರೆ. ಆದರೆ ಮಂತ್ರಿಗಳು ಯಾರು ಇಲ್ಲ ಇಡೀ ಮಂತ್ರಿ ಮಂಡಲಕ್ಕೆ ಮಾನ್ಯ ದೇಶಪಾಂಡೆ ಯವರೊಬ್ಬರೇ ಮಂತ್ರಿಗಳೇನು ? ಸುಮಾರು ೧೩ ಜನ ಮಂತ್ರಿಗಳು ಇದ್ದಾರೆ. ಆದರೆ ಯಾರೂ ಇಲ್ಲ ಆದಕ್ಕೆ ಅಧ್ಯಕ್ಷರೇ, ಮಂತ್ರಿಗಳು ಬರಲಿ ಒಂದು ೧೦ ನಿಮಿಷ ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ಮಲ್ಲವಗೌಡ ಎಸ್. ಪಾಟೀಲ್.—ಪೌಡು ಅಧ್ಯಕ್ಷರೇ, ೧೦ ನಿಮಿಷ ಸಭೆಯನ್ನು ಮುಂದಕ್ಕೆ ಹಾಕಿ ನಾವು ಹೋಗಿ ಮಂತ್ರಿಗಳು ಕೌನ್ಸಿಲ್‌ನಲ್ಲಿ ಇದ್ದಾರೋ ಇಲ್ಲವೋ ಎಂದು ನೋಡಿ ಕೊಂಡು ಬರುತ್ತೇವೆ. ನೀವು ಸುಳ್ಳು ಏತಕ್ಕೆ ಹೇಳುತ್ತೀರಿ ?

SRI R. V. DESHPANDE.—I appreciate the concern expressed by the Deputy Leader. ಈಗ ಅವರು ಮಾತನಾಡಲಿ I will see that my colleagues come.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಸರ್ಕಾರದ ವತಿಯಿಂದ ಮೆಮೋರಾಂಡಮ್ ಸಲ್ಲಿಸಿದ್ದಾರೆ. ಇದರಲ್ಲಿ ವಿಶೇಷವಾಗಿ ಮೆಮೋರಾಂಡಮ್ ಕೊಡುವಂತಹದ್ದು ಏನಿದೆ ಏನು ಆಗಿದೆ ? ಏನ್ನುವ ಒಂದು ಸವಿಸ್ತಾರ ಮಾಹಿತಿ ಅನೇಕ ಜಿಲ್ಲೆಗಳಿಂದ ಬಂದಿಲ್ಲ. ವಿವರವಾದ ಮಾಹಿತಿ ಬಂದಿಲ್ಲ ಇದು ಏನೋ ಒಂದು ತರಾತುರಿಯಲ್ಲಿ ತಯಾರು ಮಾಡಿದಂತಹ ಡಾಕ್ಯುಮೆಂಟ್ಸ್ ಇದನ್ನು ತಯಾರು ಮಾಡುವುದಕ್ಕಿಂತ ಮುಂಚೆ ಒಂದು ಇಂಟೀರಿಯಂ ಮೆಮೋರಾಂಡಮ್ ಕೊಟ್ಟು ತದ ನಂತರ ಡಿಟೇಲ್ ಮೆಮೋರಾಂಡಮ್ ಸಲ್ಲಿಸಬಹುದಿತ್ತು. ಆದನ್ನು ಬಿಟ್ಟು ಇವತ್ತಿನ ದಿವಸ ನಾವು ೭೯ ಕೋಟಿ ೬೧ ಲಕ್ಷರೂಪಾಯಿಗಳು ಕೊಡುವಂತೆ ಡಿಮ್ಯಾಂಡ್ ಮಾಡಿದ್ದೀವಿ. ಈ ಒಂದು ಮೆಮೋರಾಂಡಮ್‌ನಲ್ಲಿ Damages caused to House 411 lakhs. damages to roads and bridges 13 crores 81 lakhs, minor irrigation 653 lakhs, other public properties 1 220 lakhs, damages in Bangalore metropolitan area 42 crores. ಎಂದು ತಾವು ಹೇಳಿದ್ದೀರಿ.

ಬೆಂಗಳೂರು ನಗರ ಬಿಟ್ಟರೆ ಬೇರೆ ಕಡೆ ೪೨.೯೬ ಕೋಟಿ ರೂಪಾಯಿಗಳು ನಷ್ಟವಾಗಿದೆ ಯೆಂದು ತಿಳಿಸಲಾಗಿದೆ. ಬೇರೆ ಕಡೆಗಳಲ್ಲಿ ಯಾವ ರೀತಿ ನಷ್ಟವಾಗಿದೆ ಎಂಬ ಬಗ್ಗೆ ಡಿಟೇಲ್ ಆಗಿ ಇನ್‌ವೆಸ್ಟಿಗೇಷನ್ ಮಾಡಿಲ್ಲ. ಏಕೆಂದರೆ, ಗುಲ್ಬರ್ಗಾ ಜಿಲ್ಲೆಯ ಬಗ್ಗೆ ನಾನು ಹೇಳುತ್ತೇನೆ. ಮುಖ್ಯವಾಗಿ ಇದು ಪಾರ್ಟಿ ಪಂತ್ತು ಪಕ್ಷದ ಪ್ರಶ್ನೆಯಲ್ಲ. ಅಲ್ಲಿರುವುದು ತಮ್ಮ ಪಕ್ಷದ ಜಿಲ್ಲಾ ಪರಿಷತ್ತೇ. ಗುಲ್ಬರ್ಗಾ ಜಿಲ್ಲೆಯಲ್ಲಿ ಅವರು ಅಸೆಸ್ ಮಾಡಿರುವುದೆಷ್ಟು ಎಂದರೆ ೫೨ ಕೋಟಿ ರೂಪಾಯಿಗಳಷ್ಟು ಅಸೆಸ್ ಮಾಡಿದ್ದಾರೆ. It is nearly Rs. 52 crores. I will read that relevant portion.

> "This year unimaginable damage has happened in the District, standing crops of agriculture, tanks, roads and buildings have been suffered heavy damage estimated by the Zilla parishad to be around Rs,52 crores. The Zilla Parishad has sent a report to the State Government seeking immediate relief of Rs 7 crores for the repair works, Already sub-stantial amount has been spent on repair works of tanks and buildings."

ಆಮೇಲೆ ಅಧ್ಯಕ್ಷರೇ, ಸುಮಾರು ೫೦ ಜನರು ಈ ಒಂದು ಫ್ಲಡ್‌ನಿಂದ ತೀರಿಕೊಂಡಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ೫೨ ಕೋಟಿ ರೂಪಾಯಿಗಳಷ್ಟು ಡ್ಯಾಮೇಜ್ ಆಗಿದೆ. ಆದುದರಿಂದ ಕನಿಷ್ಟ ಪಕ್ಷ ೭ ಕೋಟಿ ರೂಪಾಯಿಗಳನ್ನು ಪರಿಹಾರ ಧನವಾಗಿ ಕೊಡಿ ಎಂದು ಕೇಳಿದ್ದರೆ ಸರ್ಕಾರದ ವತಿಯಿಂದ ಇವರು ಕೊಟ್ಟಿರುವುದು ಕೇವಲ ೨ ಲಕ್ಷ ರೂಪಾಯಿಗಳು. ಗುಲ್ಬರ್ಗಾ ಜಿಲ್ಲೆಯಲ್ಲಿ ಅನೇಕ ರಸ್ತೆಗಳು ಡ್ಯಾಮೇಜ್ ಆಗಿವೆ. ಮೊವಲೇ ಆ ಕಡೆ ಬ್ಲ್ಯಾಕ್ ಸಾಯಿಲ್: ಬ್ಲ್ಯಾಕ್

ಸಾಯಿಲ್ ಇರುವ ಕಲೆ ಅತಿವೃಷ್ಟಿಯಾದರೆ ಹೆಚ್ಚಿನ ರೀತಿಯಲ್ಲಿ ಡ್ಯಾಮೇಜ್ ಆಗುತ್ತದೆ, ರಸ್ತೆಗಳಲ್ಲಿ ಕಾರುಗಳು ಕೂಡ ಹೋಗುವ ಪರಿಸ್ಥಿತಿಯಲ್ಲಿಲ್ಲ. ಯಾದ್‌ಗಿರಿ–ರಾಯಚೂರು, ಯಾದ್‌ಗಿರ್-ಗುರುಮಿಠ್ಕಲ್, ಗುಲ್ಬರ್ಗಾ–ಯಾದ್‌ಗಿರ್, ರೋಡ್‌ಗಳು ಬಹಳ ಡ್ಯಾಮೇಜ್ ಆಗಿವೆ. ಅಂತರ ರಾಜ್ಯದ, ಅಂದರೆ ಆಂಧ್ರಪ್ರದೇಶಕ್ಕೆ ಲಿಂಕ್ ಕೊಡುವ ರೋಡ್ ಬಹಳ ಕೆಟ್ಟು ಹೋಗಿದೆ. ಕಾರು ಇರಲಿ, ಜೀಪು ಕೂಡ ಹೋಗುವುದಕ್ಕಾಗುವುದಿಲ್ಲ ಅಂಥಾ ಪರಿಸ್ಥಿತಿ ಉಂಟಾಗಿದೆ. ಸರ್ಕಾರದವರು ಅಸೆಸ್ ಮಾಡಿರುವ ನಷ್ಟದ ಅಂದಾಜಿಗೂ ವಾಸ್ತವವಾಗಿ ಆಗಿರುವ ನಷ್ಟದ ಅಂದಾಜಿಗೂ ಅಜಗಜಾಂತರ ವ್ಯತ್ಯಾಸ ಇದೆ. ಈ ರೀತಿ ಅಸೆಸ್ ಮಾಡಿದರೆ ನಮಗೆ ಹೇಗೆ ಕೇಂದ್ರದ ಸಹಾಯ ಸಿಗುತ್ತದೆ ? ಸೆಂಟ್ರಲ್ ಗೌರ್ನಮೆಂಟಿನವರಿಗೆ ನಾವು ಕೊಟ್ಟಿರುವ ಮೆಮೊರಂಡಮ್‌ಗೂ, ನೀವು ಕೊಟ್ಟಿರುವ ಮೆಮೊರಂಡಮ್‌ಗೂ ವ್ಯತ್ಯಾಸ ಉಂಟಾಗಿ ಸೆಂಟ್ರಲ್ ಗೌರ್ನಮೆಂಟಿನವರಿಗೆ ಯಾವುದು ನಿಜವಾದ ಅಸೆಸ್‌ಮೆಂಟ್ ಎಂದು ಸಂಶಯ ಬರುತ್ತದೆ. ಒಂದು ಕಡೆ ಡಿಸ್ಟ್ರಿಕ್ಟ್‌ಗಳಿಂದ ಬಂದಿರುವ ನಷ್ಟದ ರಿಪೋರ್ಟ್ ಒಂದು ತರಹ ಇದೆ, ಸರ್ಕಾರ ಕೊಟ್ಟಿರುವ ನಷ್ಟದ ರಿಪೋರ್ಟ್ ಒಂದು ತರಹ ಇದೆ. ಈ ರೀತಿ ವ್ಯತ್ಯಾಸದ ರಿಪೋರ್ಟ್‌ನ್ನು ಕೊಟ್ಟರೆ ಜನರಿಗೆ ಯಾವರೀತಿ ಸಹಾಯವನ್ನು ಮಾಡಂವುದಕ್ಕಾಗುತ್ತದೆ ? ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು ೬ ಲಕ್ಷ ಹೆಕ್ಟೇರ್‌ನಲ್ಲಿದ್ದ ತೊಗರಿ ಬೇಳೆ ಬೆಳೆಯು ನಷ್ಟವಾಗಿದೆ. ಉಣ ಮೆಣಸಿನ ಕಾಯಿಯಾ ಬೆಲೆ ಕೆ. ಜಿ.ಗೆ ೫೦ ರೂಪಾಯಿ ಆಗಿಬಿಟ್ಟಿದೆ. ಜೋಳ ಒಂದು ಕೇಜಿಗೆ ಮೂರುವರೆ ರೂಪಾಯಿಯಾಗಿದೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಇತ್ತೀಚೆಗಿನ ಮೆಣಸಿನಕಾಯಿ ಬೆಲೆ ತಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಒಂದು ಕೆ. ಜಿ. ಉಣಮೆಣಸಿನ ಕಾಯಿ ಬೆಲೆ ಈಗ ೮೦ ರೂಪಾಯಿ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ೯-೧೦-೧೯ನೇ ತಾರೀಖಿನಂದು ಅನೇಕ ಕಡೆ ತಿರುಗಾಡಿ ರಾಜ್ಯದಲ್ಲಿ ಯಾವ ಪರಿಸ್ಥಿತಿ ಇದೆ ಎಂಬುದನ್ನು ನೋಡಿಕೊಂಡು ಬಂದಿದ್ದೇನೆ. ಇವತ್ತು ಪರಿಸ್ಥಿತಿಯು ಎಷ್ಟು ಗಂಭೀರವಾಗಿದೆ ಎಂಬುದನ್ನು ನೀವೇ ಒಪ್ಪಿಕೊಂಡಿದ್ದೀರಿ.

ಮನೆಗಳಿಗೆ ಮತ್ತಿತರ ಬಾಬುಗಳಿಗೆ ಒಟ್ಟು ಹಾನಿಯಾಗಿರತಕ್ಕಂಥಾದ್ದು ೧೬,೫೦,೦೦೦ ರೂಪಾಯಿಗಳು ಒಟ್ಟು ೪೨ ಜನರು ಸತ್ತಿದ್ದಾರೆ. ಒಟ್ಟು ೧೨ ಕೋಟಿ ರೂಪಾಯಿಗಳ ನಷ್ಟವನ್ನು ತೋರಿಸುತ್ತಾರೆ, ಬೆಂಗಳೂರು ಸಿಟಿಯಲ್ಲಿ, ಬೆಂಗಳೂರು ಗ್ರಾಮಾಂತರದಲ್ಲಿ ಸುಮಾರು ೪ ಜನರು ಸತ್ತಿದ್ದಾರೆ. ಹಾಗೂ ೧೨ ಲಕ್ಷದ ೬೧೦ ರೂಪಾಯಿಗಳ ಹಾನಿಯಾಗಿದೆ ಎಂದು ಅವರು ಕೊಟ್ಟಂಥ ಉತ್ತರದಲ್ಲಿ. ಅಂದರೆ ನನ್ನ ಚುಕ್ಕೆ ಗುರುತಿನ ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಇದೆ. ಹಾಗೆಯೇ ಕೋಲಾರದಲ್ಲಿಯೂ ಕೂಡ ರಸ್ತೆಗೆ ೮೫ ಲಕ್ಷ. ಹೊಲಗಳ ಸಣ್ಣ ನೀರಾವರಿಯಲ್ಲಿ ೮೨ ೫೨ ಲಕ್ಷ, ಅದೇ ರೀತಿಯಾಗಿ ಗುಲ್ಬರ್ಗದಲ್ಲಿ ೬೩ ಲಕ್ಷ ರೂಪಾಯಿಗಳು ಮನೆಗಳು ಹಾಳಾಗಿರುವವರಿಗೆ ಮತ್ತು ರಸ್ತೆಗೆ ೧೦ ಕೋಟಿ ೨೨ ಲಕ್ಷ ರೂಪಾಯಿಗಳು ಮತ್ತು ನೀರಾವರಿ ಟ್ಯಾಂಕ್ಸ್, ಬ್ರೀಜ್ ಅದುಂದುದರ ರಿಪೇರಿಗೆ ೧೭ ೮೦ ಲಕ್ಷ ರೂಪಾಯಿಗಳು ಎಂದು ಇದೆ. ಒಟ್ಟಿಗೆ ಸರಕಾರದ ಒಂದು ಲೆಕ್ಕಪತ್ರದ ಪ್ರಕಾರ ೩೦ ಕೋಟಿ ರೂಪಾಯಿಗಳೆಷ್ಟು ನಷ್ಟವಾಗಿದೆ ಎನ್ನತಕ್ಕಂಥ ಮಾತನ್ನು ಇವೊತ್ತಿನ ದಿವಸ ಸ್ಪಷ್ಟವಾಗಿ ಹೇಳಿದ್ದಾರೆ. ಇವೊತ್ತಿನ ದಿವಸ ನಾನು ತಿಳಿದ ಪ್ರಕಾರ ೬೦,೦೬ ೯೫೮ ಲಕ್ಷ ಹೆಕ್ಟೇರ್‌ನ ಗಳಲ್ಲಿ ಬೆಳೆಗೆ ಹಾನಿಯಾಗಿದೆ. ಜಾನುವಾರುಗಳು ಸುಮಾರು ೪೬೮ ಸತ್ತಿವೆ, ೧೧೪ ಜನರು ನಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಇದಕ್ಕೆಲ್ಲಾ ನೀವು ಮಾಡಿದ ಒಟ್ಟು ವ್ಯವಸ್ಥೆ ಏನು ? ಅದಕ್ಕೆ ಏನಾದರೂ ನೀವು ನಿರ್ದಿಷ್ಟವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಾ ? ನಮ್ಮ ಜಿಲ್ಲಾ ಪರಿಷತ್ತಿನವರು ನಿಮ್ಮಲ್ಲಿ ಕೇಳಿಕೊಂಡಿದ್ದು ೫೦ ಕೋಟಿ ರೂಪಾಯಿಗಳು. ಅಷ್ಟು ಬಿಡಾಗಡೆ ಮಾಡುವುದಕ್ಕೆ ಒಂದು ಮೇಳೆ ಆಗಲಿದ್ದರೆ, ಸದ್ಯಕ್ಕೆ ೬ ಕೋಟಿ ರೂಪಾಯಿಗಳನ್ನಾದರೂ ಬಿಡಾಗಡೆ ಮಾಡಿ ಎಂದು ಕೇಳಿಕೊಂಡಿದ್ದಾರೆ. ಆದರೆ ನೀವು ಅವರಿಗೆ ಕೇವಲ ಎರಡು ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಹಾಗಾದರೆ ಇದೇ ಅಳತೆಗೋಲಿನ ಮೇಲೆ ಎಲ್ಲ ಜಿಲ್ಲೆಯವರಿಗೂ ಕೊಟ್ಟರೆ ಬಹುದು, ಇದು ಧಾರವಾಡ ಕೋಲಾರ, ಮೈಸೂರು ಬೆಂಗಳೂರು, ಯಾವುದೇ ಇರಲಿ, ಅವುಗಳಿಗೆ ಇದೇ ಮಾಪನದಲ್ಲಿ ನೀವು ಹಣವನ್ನು ಹಂಚಿಬಿಡಬಹುದು. ಇದನ್ನು ನೋಡಿದರೆ ಪರಿಹಾರಕ್ಕಾಗಿ ಸರಕಾರ ಹಾಕಿಕೊಂಡ ಕಾರ್ಯಕ್ರಮ ಏನೂ ಇಲ್ಲ ಎಂದು ಹೇಳಬೇಕಾಗುತ್ತದೆ. ಈ ಅತಿವೃಷ್ಟಿಯ ಕಡೆಗೆ ಸರಕಾರವು ಏನೂ ಗಮನವನ್ನು ಹರಿಸಿಲ್ಲ ಎಂದು ಹೇಳಬೇಕಾಗುತ್ತದೆ. ಸರಕಾರ ಈ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ಮಾಡಿದೆ ಎಂಬ ಅಪಾದನೆಯನ್ನು ಮಾಡಬೇಕಾಗುತ್ತದೆ. ತಾವುಗಳು

ಮುಂಡಾನೆ ಗದ್ದಾನೆ ಸೆಳೆಯುವ ಸೂಚನೆ ಒಂದಕ್ಕೆ ಉತ್ತರ ಕೊಡುವಾಗ ಎಷ್ಟು ಹಣವನ್ನು ಒದಗಿಸ ಬೇಕಾಗಿತ್ತೋ ಅಷ್ಟು ಹಣವನ್ನು ಒದಗಿಸಲಿಕ್ಕೆ ಸಾಧ್ಯವಾಗಲಿಲ್ಲ ಎಂದು ಒಪ್ಪಿಕೊಂಡಿದ್ದೀರಿ. ಹಾಗಾದರೆ...

ಅಧ್ಯಕ್ಷರು.—ಈಗ ತಾವು ಸರಕಾರದಿಂದ ಏನು ಆಗಬೇಕೆಂದು ಹೇಳಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ದಿಸೆಯಲ್ಲಿ ಸರಕಾರದವರು ಸಂಪೂರ್ಣವಾಗಿ ವಿಫಲ ರಾಗಿದ್ದಾರೆ ಮತ್ತು ಮೆಮೊರಾಂಡಂ ಕೂಡ ಈ ಕುರಿತು ಸರಿಯಾಗಿ ತಯಾರು ಮಾಡಿಲ್ಲ ಎಂದು ಹೇಳುತ್ತಿದ್ದೇನೆ. ಸರಕಾರಕ್ಕೆ ಬಂದಂಥ ಜಿಲ್ಲಾವಾರು ರಿಪೋರ್ಟ್ ಇದೆ. ಅದರ ಪ್ರಕಾರ ಇವರು ಹೋಗಿದ್ದರೆ, ಇವೊತ್ತು ಕೋಟ್ಯಾಂತರ ರೂಪಾಯಿಗಳು ಬೇಕು. ಇಂಥ ಸಂದರ್ಭದಲ್ಲಿ ಈ ಬಗ್ಗೆ ಇವರು ಏನಾದರೂ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು ರಿಪೋರ್ಟ್ ಒಂದನ್ನು ತಯಾರು ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಿದ್ದರೂ ಅವರಿಂದ ಹಣ ಬಂದಿಲ್ಲ ಎಂಬ ವಾದವನ್ನು ಹೇಳುತ್ತಿದ್ದಾರೆ. ಆದರೆ ಕೇಂದ್ರ ಸರಕಾರದ ಹಣ ಬರುವವರೆಗೆ ಯಾವ ರಿಲೀಫ್ ಕಾರ್ಯಗಳೂ ಆಗುವುದು ಬೇಡವೇ ಅವರು ಹಣ ಕೊಡುವವರಿಗೆ ನೀವು ವೈಟ್ ಮಾಡುವುದು ಬೇಕಾಗಿಲ್ಲ. ಸಂಬಂಧಪಟ್ಟ ಕಡೆಗಳಿಗೆ ನಿಮ್ಮ ಆಫಿಸ್ಟೆನ್ಸ್‌ನ್ನು ಎಕ್ಸ್‌ಟೆಂಡ್ ಮಾಡಬೇಕಾಗುತ್ತದೆ. ನೀವು ಮಾಡಿದ ಖರ್ಚನ್ನು ನಂತರ ಬೇಕಾದರೂ ವಿವರ ಕೊಟ್ಟು ಕೇಂದ್ರ ಸರಕಾರದಿಂದ ಪಡೆದುಕೊಳ್ಳಬಹುದು ಬೇರೆ ಎಲ್ಲಾ ಕೆಲಸಕಾರ್ಯಗಳನ್ನು ಈ ಸಂದರ್ಭದಲ್ಲಿ ನಿಲ್ಲಿಸಿ ಪರಿಹಾರ ಕೆಲಸಕಾರ್ಯಗಳಿಗೆ ಆದ್ಯತೆಯನ್ನು ಕೊಡಬೇಕಾದುದು ಸರಕಾರದ ಕರ್ತವ್ಯವಾಗಿದೆ. ಇದನ್ನು ಬಿಟ್ಟು ನಾವು ಕೇಂದ್ರ ಸರಕಾರಕ್ಕೆ ಮೆಮೊರಾಂಡಂ ಕೊಟ್ಟಿದ್ದೇವೆ. ಅವರಿಂದ ಇನ್ನೂ ಹಣ ಬಂದಿಲ್ಲ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು.—ಖರ್ಗೆಯವರೇ, ತಾವು ಪ್ರಾಗ್ರಾಮಂ ಟೈಂ ತೆಗೆದುಕೊಂಡಿದ್ದೀರಿ. ಒಂದು ಗಂಟೆ ಆಯಿತು ತಾವು ಭಾಷಣ ಪ್ರಾರಂಭ ಮಾಡಿ, ದಯವಮಾಡಿ ಮುಕ್ತಾಯ ಮಾಡಿ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ,—೧೯೮೩ನೇ ಇಸವಿಯಲ್ಲಿ ಕೇಂದ್ರದವರಿಂದ ಮೂರು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಖರ್ಚು ಮಾಡಿದ್ದೀರಿ. ಆದರ ಲೆಕ್ಕಪತ್ರ ಇನ್ನೂ ಕೊಟ್ಟಿಲ್ಲ. ಈಗ ಕೇಂದ್ರದವರು ಹೇಳಬಹುದು. ೧೯೮೩ರಲ್ಲಿ ಕೊಟ್ಟ ಹಣಕ್ಕೆ ಇನ್ನೂ ತನಕ ಲೆಕ್ಕವನ್ನು ಕೊಟ್ಟಿಲ್ಲ, ಅಂದಮೇಲೆ ಈಗ ಹಣವನ್ನು ಹೇಗೆ ಬಿಡುಗಡೆ ಮಾಡುವುದು ಎಂಬ ಪ್ರಶ್ನೆಯೂ ಅವರ ಮುಂದೆ ಬರಬಹುದು. ಆದುದರಿಂದ...

ಅಧ್ಯಕ್ಷರು.—ಕೊನೆಗೆ ಸರಕಾರದವರಿಂದ ಏನು ಆಗಬೇಕಾಗಿದೆ ಎಂಬುದನ್ನು ತಾವು ಹೇಳಿಬಿಡಿ.

೬-೦೦ ಪಿ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕಾಗಿ ನಾನು ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದಿಷ್ಟೆ ಸಂಬಂಧಪಟ್ಟ ಮಂತ್ರಿಗಳು ಅದರಲ್ಲಿ ಆಸಕ್ತಿ ವಹಿಸಿ ಸಮಗ್ರವಾಗಿ ಇದನ್ನು ರಿವ್ಯೂ ಮಾಡಬೇಕು ಯಾರ್ಯಾರು ಇನ್‌ಚಾರ್ಜ್ ಮಿನಿಸ್ಟರ್ಸ್ ಜಿಲ್ಲೆಗಳಲ್ಲಿ ಇದ್ದಾರೋ ಅವರು ಕನಿಷ್ಟಪಕ್ಷ ಆ ಜಿಲ್ಲೆಗಳಲ್ಲಿ ಎಷ್ಟು ಹಾನಿಯಾಗಿದೆ ಎಂದು ಸರ್ವೆ ಮಾಡಿಸಿ ರಿಲೀಫ್ ಕೊಡಿಸುವ ಬಗ್ಗೆ ಯೋಚನೆ ಮಾಡಬೇಕು ಇಲ್ಲದಿದ್ದರೆ ಏನೂ ಪ್ರಯೋಜನವಾಗದಿಲ್ಲ, ಎಲ್ಲೆಲ್ಲಿಗೆ ರಿಲೀಫ್ ಬೇಕೋ ಅಲ್ಲಿಗೆ ತಕ್ಷಣ ಕಳಿಸುವ ವ್ಯವಸ್ಥೆ ಮಾಡಬೇಕು. ಅಟ್‌ಲೀಸ್ಟ್ ಆಡಾಕ್ ಅಮೌಂಟ್‌ನ್ನಾದರೂ ಕಳಿಸಿಕೊಡಿ. ಕೆಲವು ಕಡೆ ಬೀಜವೇ ಇಲ್ಲ. ಅದಕ್ಕೆ ವ್ಯವಸ್ಥೆ ಮಾಡಬೇಕು ಏಕೆಂದರೆ ನಮ್ಮ ಕಡೆ ಬಿತ್ತಿದ್ದೆಲ್ಲ ಹೋಯಿತು. ಆಮೇಲೆ ಅಲ್ಪ ಅವಧಿ ಬೆಳೆಗಳಿಗೆ ಬೇಕಾದ ಬೀಜಗಳಿಗೆ ವ್ಯವಸ್ಥೆ ಮಾಡಬೇಕು. ಮತ್ತು ಎಲ್ಲೆಲ್ಲಿ ಮನೆಗಳು ಬಿದ್ದುಹೋಗಿವೆಯೋ ಅಲ್ಲೆಲ್ಲಾ ಅವುಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಅದಕ್ಕೆ ಸಾಲ ಅದರೂ ಮಾಡಿ ಅಥವಾ ಬೇರೆ ಮಾಡಿ ರಿಲೀಫ್ ಏನಾದರೂ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಪಂಪಾಪತಿ.—ಸ್ವಾಮಿ, ನಮ್ಮ ಕಾರ್ಮಿಕರದ್ದು ಒಂದು ನೋಟೀಸ್ ಇದೆ.

ಅಧ್ಯಕ್ಷರು.—ಕೂತುಕೊಳ್ಳಿ.

ಶ್ರೀ ಪಂಪಾಪತಿ.—ಏನು ಸ್ವಾಮಿ ನಾವು ನಿಂತುಕೊಂಡರೆ ಸಿಟ್ಟು ಮಾಡ್ತೀರಿ.

ಶ್ರೀ ಬಿ. ಎ. ಉಮಾರಬ್ಬ—ನನ್ನದೂ ಒಂದು ನೋಟೀಸ್ ಇದೆ,

ಅಧ್ಯಕ್ಷರು,—ನೆಕ್ಸ್ಟ್ ನಿಮ್ಮದು.

ಶ್ರೀ ಆರ್. ವಿ. ದೇಶಪಾಂಡೆ (ನಗರಾಭಿವೃದ್ಧಿ ಸಚಿವರು).—ಅಧ್ಯಕ್ಷರೇ ಈ ಸಲ ಭಾರೀ ಮಳೆಯಿಂದ ಆದ ಹಾನಿಯ ಬಗ್ಗೆ ಹಾಗೂ ಈ ಸಂಬಂಧದ ಸರ್ಕಾರದ ಕೆಲಸದ ಬಗ್ಗೆ ಟೀಕೆ ಟಿಪ್ಪಣಿ ಮಾಡಿದ್ದಾರೆ. ಸರ್ಕಾರ ಪ್ರಾಮಾಣಿಕವಾಗಿ ಕೆಲಸ ಮಾಡಿಲ್ಲ, ಲೋಪದೋಷಗಳು ಇವೆ ಎಂದರು. ಇದು ಸರಿಯಲ್ಲ. ಇದು ಅನ್‌ಪ್ರಿಸಿಡೆಂಟೆಡ್ ರೈನ್ ಸತತವಾಗಿ ೫ ವರ್ಷ ಭೀಕರ ಬರಗಾಲದ ನಂತರ ಬಂದ ಮಳೆಯಿಂದ ರಾಜ್ಯದಲ್ಲಿ ಒಂದು ರೀತಿಯ ಆಶಾಭಾವನೆ ನಿರ್ಮಾಣವಾಗಿತ್ತು ಎಲ್ಲ ಕಡೆ ಒಳ್ಳೆಯ ಬೆಳೆ ಬಂದಿತ್ತು, ಅದೇ ಪ್ರಕಾರ ರಿಸರ್ವಾಯರ್ಸ್‌ಲ್ಲಿ ಪೂರ್ಣವಾಗಿ ತುಂಬಿ ಕೈಗಾರಿಕಾ ಕ್ಷೇತ್ರದಲ್ಲಿ ಸಹ ಒಳ್ಳೆಯದಾಗಬಹುದೆಂದು ಆಶಯ ಮಾಡಿದ್ದವು. ಆದರೆ ಸೆಪ್ಟೆಂಬರ್ ತಿಂಗಳಲ್ಲಿ ಅದರಲ್ಲೂ ೯ ರಿಂದ ೧೨ನೇ ತಾರೀಕಿನವರೆಗೆ ಮಳೆಯಾಯಿತು. ಇದರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಒಳ್ಳೆಯ ಭರವಸೆ ನಿರ್ಮಾಣವಾಗಿದ್ದರೂ ಸಹ ರಾಜ್ಯದಲ್ಲಿ ೩೭ ಲಕ್ಷ ಹೆಕ್ಟೇರ್‌ನಲ್ಲಿ ಖರೀಫ್ ಸೊಯಿಂಗ್ ಆಗಿದ್ದು ಅದರ ಪೈಕಿ ಆರು ಲಕ್ಷ ಹೆಕ್ಟೇರ್ ಭೂಮಿಗೆ ಸಾಕಷ್ಟು ಅನಾಹುತವಾಗಿದೆ ಇದನ್ನು ಸದನದ ಗಮನಕ್ಕೂ ತಂದಿದ್ದೇನೆ ಮತ್ತು ಕೇಂದ್ರದ ಗಮನಕ್ಕೂ ತಂದಿದ್ದೇನೆ ಈಗಾಗಲೇ ಬೆಂಗಳೂರು ನಾರ್ತ್ ತಾಲ್ಲೂಕಿನಲ್ಲಿ ದೇಶದಲ್ಲೇ ಅತ್ಯಂತ ಹೆಚ್ಚಾದ ೧೨೮ ಎಂ. ಎಂ. ಮಳೆಯಾಗಿದೆ ಇಡೀ ಸೆಂಚುರಿಯಲ್ಲಿ ಇಷ್ಟು ಮಳೆಯಾಗಿರಲಿಲ್ಲ. ಈ ಮಳೆಯಿಂದ ರಾಜ್ಯದ ೫೬ ತಾಲ್ಲೂಕುಗಳಲ್ಲೂ ಕೂಡಾ ಆಫೆಕ್ಟ್ ಆಗಿದೆ, ತೊಂದರೆಗೆ ಈಡಾದ ಹಳ್ಳಿಗಳು ೧೯೨೭ ಮನೆಗಳು ಪೂರಾ ಡ್ಯಾಮೇಜಾಗಿದ್ದು ಮತ್ತು ಸೆಮಿ ಡ್ಯಾಮೇಜಾಗಿದ್ದು ೧೧,೫೧೩

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಕೊಡುವ ವರದಿಯನ್ನೇ ನಾವು ಅಲ್ಲಗಳೆಯುತ್ತೇವೆ. ಗುಲ್ಬರ್ಗ ಒಂದರಲ್ಲೇ ೬ ೫ ಲಕ್ಷ ಹೆಕ್ಟೇರ್ ಭೂಮಿ ಹಾಳಾಗಿದೆ.

ಶ್ರೀ ಆರ್. ವಿ. ದೇಶಪಾಂಡೆ.—ಅದೇ ಪ್ರಕಾರ ಜೀವ ಕಳೆದುಕೊಂಡವರ ಸಂಖ್ಯೆ ೧೧೪, ದನಗಳ ಸಾವಿನ ಸಂಖ್ಯೆ ೧೨೩, ಒಡೆದ ಕೆರೆಗಳ ಸಂಖ್ಯೆ ೮೩, ಹೀಗಾಗಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಇಂತಹ ಸರಿಸ್ಥಿತಿ ನಿರ್ಮಾಣವಾದ ನಂತರ ಕೇಂದ್ರ ಸರ್ಕಾರಕ್ಕೆ ೯೦. ೬೧ ಲಕ್ಷ ರೂಪಾಯಿನ ಮೆಮೋರಾಂಡಮ್‌ನ್ನು ಈಗಾಗಲೇ ಕೊಟ್ಟಿದ್ದೇವೆ

ರಾಜ್ಯ ಸರಕಾರದ ವತಿಯಿಂದ ಈ ಮೆಮೊರ್ಯಾಂಡಮ್ ಸಬ್‌ಮಿಟ್ ಮಾಡುವುದಕ್ಕೆ ತಡವಾಗಿದೆ ಎಂದು ಮಾನ್ಯ ಸದಸ್ಯರಲ್ಲಿ ಕೆಲವರು ಹೇಳಿದ್ದಾರೆ. ೯ ರಿಂದ ೧೩—೧೪ ರವರೆಗೆ ಮಳೆಯಾಗಿತ್ತು. ಮಳೆ ನಿಂತ ತಕ್ಷಣ ಕ್ರಮ ತೆಗೆದುಕೊಂಡಿದ್ದೇವೆ. ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳ ಕಡೆಯಿಂದ ವರದಿ ತರಿಸಿದ ನಂತರ ಸೆಪ್ಟೆಂಬರ್ ಅಂತ್ಯದ ಒಳಗೆ ಮನವಿ ಸಲ್ಲಿಸಿದ್ದೇವೆ. ಇದರಲ್ಲಿ ತಡವಾಗಿದೆ ಎಂದು ಹೇಳಿದರೆ ಅದರ ಬಗ್ಗೆ ನಮ್ಮ ಕಡೆಯಿಂದ ಯಾವುದೇ ವಾದ ಇಲ್ಲ. ಇದರ ಬಗ್ಗೆ ನಾವು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇವೆ ೩ ಕೋಟಿ ರೂಪಾಯಿ ಮಾರ್ಜಿನ್ ಮನಿಯನ್ನು ರಿಲೀಸ್ ಮಾಡಿದ್ದೇವೆ ೪ ಮೂರು ಕೋಟಿ ರೂಪಾಯಿಯನ್ನು ರಿಲೀಸ್ ಮಾಡಿ ಎಂದು ಈಗಾಗಲೇ ಮನವಿ ಮಾಡಿದ್ದೇವೆ. ಬೆಂಗಳೂರು ನಗರಕ್ಕೆ ೪೨ ಕೋಟಿ ರೂಪಾಯಿಗಳು ಬೇಕು ಎಂದು ಕೇಳಿದ್ದೇವೆ. ಡ್ರೈನೇಜ್ ಕ್ಲೀನ್ ಆಗಿಲ್ಲ ಹೂಳು ತುಂಬಿದೆ, ಇದರಿಂದ ಜನರಿಗೆ ತೊಂದರೆಯಾಗಿದೆ ಎಂದು ಹೇಳಿದ್ದೀರಿ, ಅದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಇದು ಸ್ವಲ್ಪ ವಾಟ್ಸಿಗೆ ಆಗಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ೪—೫ ದಿನ ಬೆಂಗಳೂರು ನಗರದಲ್ಲಿನ ಪ್ರತಿಯೊಂದು ಭಾಗಕ್ಕೆ ಭೇಟಿ ಕೊಟ್ಟು, ಈಗ ೧ ಕೋಟಿ ೩೨ ಲಕ್ಷ ರೂಪಾಯಿಯಂ ಕೆಲಸವನ್ನು ಬೆಂಗಳೂರು ನಗರ ಕಾರ್ಪೊರೇಷನ್ ವತಿಯಿಂದ ತೆಗೆದುಕೊಂಡಿದ್ದೇವೆ. ಆ ಕೆಲಸ ನಡೆಯುತ್ತಿದೆ. ಇನ್ನು ಯಾರು ಡ್ರೈನ್ ಮೇಲೆ ಮನೆ ಕಟ್ಟಿದ್ದಾರೆ ಆ ಜನರಿಗೆ ಪುನಃ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಿ ಎಂದು ಹೇಳಿದರೆ ಅದು ಸಾಧ್ಯವಿಲ್ಲ. ಆದರೆ ಕಡುಬಡವರು ಯಾರಿದ್ದಾರೆ ಅಂತಹವರಿಗೆ ನಿವೇಶನ ವಿಲ್ಲದಿದ್ದರೆ ಅವರಿಗೆ ಬೇರೆ ನಿವೇಶನ ಕೊಡುವುದು ಸರಕಾರದ ಜವಾಬ್ದಾರಿಯಾಗಿದೆ, ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕೊಟ್ಟಿದ್ದೇನೆ. ಕೇಂದ್ರ ಸರ್ಕಾರಕ್ಕೆ ಮೆಮೊರ್ಯಾಂಡಮ್ ಕೊಡುವಾಗ ಸರಿಯಾದ ಏವರಣೆಯನ್ನು ಪಡೆಯದೆ ನೀಡಿದ್ದೀರಿ ಎಂದು ಮಾನ್ಯ

ಖರ್ಗೆಯವರು ಹೇಳಿದ್ದು ಸರಿಯಲ್ಲ. ಯಾವುದೇ ಒಂದು ಸರಕಾರ ಕೆಲಸ ಮಾಡಬೇಕಾದರೆ ಅಥವಾ ಯಾವುದೇ ವರದಿಯನ್ನು ತರಿಸಿಕೊಳ್ಳಬೇಕಾದರೆ ಮುಖ್ಯ ಕಾರ್ಯದರ್ಶಿಗಳು ಜಿಲ್ಲಾಧಿಕಾರಿಗಳು ಮೇಲೆಯೇ ಡಿಪೆಂಡ್ ಆಗಬೇಕಾಗುತ್ತದೆ. ಅವರ ಕಡೆಯಿಂದ ವರದಿ ಬಂದ ನಂತರ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಗುಲ್ಬರ್ಗಾ ಜಿಲ್ಲೆಯ ಜಿಲ್ಲಾಪರಿಷತ್ತಿನವರು ೫೦ ಕೋಟಿ ಪರಿಹಾರಕ್ಕೆ ಮನವಿ ಕೊಟ್ಟಿದ್ದು ನಿಜ, ನಾನು ಒಪ್ಪಿಕೊಳ್ಳುತ್ತೇನೆ. ನಾವು ಕೇಂದ್ರ ಸರಕಾರದಿಂದ ಹಣವನ್ನು ಕೇಳಬೇಕಾದರೆ ನಮ್ಮ ಮೇಲೆ ಕೆಲವು ನಿರ್ಬಂಧಗಳಿವೆ. ೫೦ ಕೋಟಿ ರೂ ಸಾಮರ್ಥ್ಯ ಕೋಟಿ ಕೇಳಿದರೆ ಅವರು ಕೊಡುವುದಿಲ್ಲ. ಕೇಂದ್ರ ಸರಕಾರದ ಗೈಡ್‌ಲೈನ್ಸ್ ಪ್ರಕಾರ ನಾವು ಹಣವನ್ನು ಕೇಳಬೇಕಾಗುತ್ತದೆ. ಯಾವ ರೈತರ ಬೆಳೆಗಳು ಹಾನಿಯಾಗಿವೆ, ಸೀಡ್ಸ್ ಲಾಸ್ ಆಗಿದೆ ಎಂದರೆ ಅಂತಹವರ ರಕ್ಷಣೆಯನ್ನು ನಾವು ಮಾಡಬಹುದು, ಆದರೆ ಎಲ್ಲವನ್ನೂ ನಾವೇ ಮಾಡುವುದಕ್ಕಾಗುವುದಿಲ್ಲ. ೩—೪ ದಿವಸಗಳ ಹಿಂದೆ ನಾನು ಅಧಿಕಾರಿಗಳಿಗೆ ಆದೇಶ ನೀಡಿದ್ದೇನೆ. ಸ್ಥಳೀಯ ಶಾಸಕರ, ಸಂಸತ್ ಸದಸ್ಯರ ಜೊತೆಯಲ್ಲಿ ಇವರ ಬಗ್ಗೆ ಜಾಯಿಂಟ್ ಮಾಡಬೇಕು ಮತ್ತು ನಾವು ಕೇಂದ್ರ ಸರಕಾರಕ್ಕೆ ಮೆಮೊರ್ಯಾಂಡಮ್ ಕೊಟ್ಟ ನಂತರ ಕೂಡ ಎಲ್ಲಿಯಾದರೂ ಮಳೆಯಾಗಿದ್ದು ಅಥವಾ ಆ ಪಟ್ಟಿಯಲ್ಲಿ ಸೇರಿಸುವುದು ಉಳಿದಿದ್ದರೆ ಅದನ್ನೂ ಸೇರಿಸಿ ಸಪ್ಲಿಮೆಂಟರಿ ಮೆಮೊರ್ಯಾಂಡಮ್ ಅನ್ನು ಸರಕಾರಕ್ಕೆ ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ, ಮುಖ್ಯ ಕಾರ್ಯದರ್ಶಿಗಳಿಗೆ ಆದೇಶ ನೀಡಿದ್ದೇನೆ. ೨೫ ಕೋಟಿ ರೂಪಾಯಿಗಳ ಇಂಟೇರಿಯಮ್ ರಿಲೀಫ್ ಕೊಡಬೇಕೆಂದು ಕೂಡ ಮನವಿ ಮಾಡಿಕೊಂಡಿದ್ದೇವೆ. ಬರುವ ೧೯ನೇ ತಾರೀಖು ನಾನೇ ಸ್ವತಃ ದೆಹಲಿಗೆ ಹೋಗುತ್ತಿದ್ದೇನೆ. ಆಗ ಕೃಷಿ ಮಂತ್ರಿಯವರನ್ನು ಭೇಟಿಯಾಗಿ ೨೫ ಕೋಟಿ ಇಂಟೇರಿಯಮ್ ರಿಲೀಫ್‌ನ್ನು ಕೊಡುವಂತೆ ವಿನಂತಿ ಮಾಡುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಿನ್ನೆಯ ದಿವಸ ಟೆಲಿವಿಷನ್‌ನಲ್ಲಿ ಪ್ರಧಾನ ಮಂತ್ರಿಗಳು ಹೇಳಿದ್ದನ್ನು ತಾವು ಕೇಳಿದ್ದೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ನಾವು ಏನು ನಾರ್ಮ್ಸ್ ಅನ್ನು ಮಾಡಿದ್ದೇವೆ ಅದನ್ನು ಬಹಳ ಹಿಂದೆ ಪಾಡಿದ್ದು, ಅದನ್ನು ರಿವೈಸ್ ಮಾಡಬೇಕೆಂದು ಪ್ಲಾನಿಂಗ್ ಕಮೀಷನ್‌ರವರಿಗೆ ಮತ್ತು ನಮ್ಮ ಕಚೇರಿಯವರಿಗೆ ಹೇಳಿದ್ದೇನೆ. ಮುಂದೆ ಅದರ ಪ್ರಕಾರ ಕೊಡುತ್ತೇವೆ ಎಂದು ಹೇಳಿದ್ದಾರೆ. ರಿವೈಸ್ ನಾರ್ಮ್ಸ್ ಪ್ರಕಾರ ತಾವು ಹೆಚ್ಚಿಗೆ ಕೇಳಬೇಕು. ತಾವು ದೆಹಲಿಗೆ ಭೇಟಿ ಕೊಡುತ್ತೇನೆಂದು ಹೇಳುತ್ತಿದ್ದೀರಿ, ಆಗ ಕೇಳಿದರೆ ಒಳ್ಳೆಯದು ಪ್ರತಿಯೊಂದು ಜಿಲ್ಲೆಯ ಶಾಸಕರನ್ನು, ಜಿಲ್ಲಾಪರಿಷತ್ತಿನವರನ್ನು ಪುನಃ ಕೇಳಿ ಅವರ ಹತ್ತಿರ ವರದಿ ತರಿಸಿಕೊಂಡ ಮೇಲೆ ಸಪ್ಲಿಮೆಂಟರಿ ಮೆಮೊರ್ಯಾಂಡಮ್ ಅನ್ನು ಕಳಿಸತಕ್ಕಂಥಾದ್ದು ಒಳ್ಳೆಯದು. ನಮ್ಮ ಭಾಗದಲ್ಲಿ ಹಾನಿಯಾಗಿರತಕ್ಕಂತಹ ಕೆಲವು ಭಾಗಗಳು ಅದರಲ್ಲಿ ಇಲ್ಲ. ಸಪ್ಲಿಮೆಂಟರಿ ಮೆಮೊರ್ಯಾಂಡಮ್ ಅನ್ನು ಕಳಿಸಬೇಕೆಂದು ಇದ್ದೀರಿ, ಅದು ಒಳ್ಳೆಯದು. ರಿವೈಸ್ ನಾರ್ಮ್ಸ್ ಅನ್ನು ತಯಾರು ಮಾಡಬೇಕೆಂದು ಪುನಃ ನಮ್ಮ ಪ್ರಧಾನ ಮಂತ್ರಿಯವರು ಕೇಳಿದ್ದಾರೆ ಆದರ ಪ್ರಕಾರ ತಾವು ಮೆಮೊರ್ಯಾಂಡಮ್ ಅನ್ನು ಕಳಿಸಬೇಕೆಂದು ವಿನಂತಿ ಮಾಡುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಇವರು ಕೇಂದ್ರದಿಂದ ಹಣ ಬರಬೇಕು ಎಂದು ಹೇಳುವುದು ಸರಿ. ಇಲ್ಲಿ ನನಗೆ ಇಷ್ಟು ಅರ್ಜಿಗಳು ಕವರ್‌ಗಳು ಬಂದಿವೆ. 'ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿಗೆ ಸೇರಿದ ಗ್ರಾಮದ ನಿವಾಸಿಗಳಾದ ಈ ಕೆಳಗೆ ಸಹಿ ಮಾಡಿರುವ ರೈತರುಗಳಾದ ನಾವುಗಳು ಸರ್ಕಾರದ ಗಮನಕ್ಕೆ ತರಲಿಚ್ಛಿಸುವುದೇನೆಂದರೆ ವೃಷಭಾವತಿ ಕೊಳೆಯು ನೆರೆಯಿಂದ ತೊಂದರೆಯಾದಂಥ ರೈತರುಗಳಿಗೆ ಹಂಚಿದ ಸರ್ಕಾರದ ಹಣ ದುರ್ವಿನಿಯೋಗವಾದ ಬಗ್ಗೆ ಬರೆದುಕೊಂಡ ಅರ್ಜಿ'' ಈ ರೀತಿಯಲ್ಲಿ ಅವರು ಹೇಳಿದ್ದಾರೆ. ನಾಲ್ಕು ನೂರು ರೂಪಾಯಿಯನ್ನು ಒಬ್ಬೊಬ್ಬರಿಗೂ ಕೊಡಬೇಕಂತೆ ಎಂದು ಹೇಳಿ ಡೆಪ್ಯುಟಿ ಕಮಿಷನರ್ ಬಂದರು ಒಬ್ಬ ಎಂ.ಎಲ್.ಎ. ಕೈಯಲ್ಲಿ ಅದನ್ನು ಕೊಡಿಸಿದರು. ಅವರು ಅಲ್ಲಿದ್ದ ರೈತರುಗಳಿಗೆ ಮಾತ್ರ ಕವರ್‌ನಲ್ಲಿ ಹಾಕಿ ಕೊಟ್ಟುಬಿಟ್ಟು, ಬಾಕಿಯವರಿಗೆಲ್ಲಾ ಮನೆಯ ಹತ್ತಿರ ಕೊಡುತ್ತೇವೆ ಎಂದು ಹೇಳಿ ಹೊರಟು ಹೋದರು. ರೆವಿನ್ಯೂ ಇನ್ಸ್‌ಪೆಕ್ಟರ್ ೧೦೦ ರೂಪಾಯಿ ೧೫೦ ರೂಪಾಯಿ ಈ ರೀತಿಯಾಗಿ ಕೊಟ್ಟು ಕವರ್ ಮೇಲೆ ನಾಲ್ಕು ನೂರು ರೂಪಾಯಿ ಎಂದು ಬರೆದುಬಿಟ್ಟು ಬರೀ ಬಿಳಿ ಕಾಗದ ಮೇಲೆ ಸ್ಟ್ಯಾಂಪನ್ನು ಹಚ್ಚಿ ರಸೀದು ಮಾಡಿಸಿಕೊಂಡು ಹೊರಟು ಹೋದರು. ಈ ರೀತಿಯಲ್ಲಿ ಹಣ ದುರ್ವಿನಿಯೋಗವಾಗಿರುತ್ತದೆ, ಇದಕ್ಕಾಗಿ ಸೆಂಟ್ರಲ್‌ನಿಂದ ಹಣ ಬರಬೇಕೇ ಸ್ವಾಮಿ? ಇಷ್ಟು

ಕವರ್‌ಗಳು ನನ್ನ ಹತ್ತಿರ ಇದೆ, ಎಲ್ಲದಕ್ಕೂ ರುಜು ಮಾಡಿದ್ದಾರೆ. ಯಾರಿಗೆ ತಲುಪಿಸುವುದಕ್ಕೆ ಈ ದುಡ್ಡು ಕೇಂದ್ರದಿಂದ ಬರಬೇಕು. ನೊಂದವರಿಗೆ ಹೊಟ್ಟೆಗೆ ಹಿಟ್ಟಿಲ್ಲದೆ ಸಾಯುತ್ತಿರುವವರಿಗಷ್ಟೇ ದುಡ್ಡನ್ನು ಕೊಡಬೇಕಾಗಿರುವುದು, ಇವರ ಆಫೀಸರ್‌ಗಳು ಬೆಚ್ಚಗೆ ಊಟ ಮಾಡುವುದಕ್ಕೆ ಕೇಂದ್ರದಿಂದ ಹಣ ಬರಬೇಕಾಗಿದೆಯೇ? ಸೆಂಟ್ರಲ್‌ನಿಂದ ದುಡ್ಡು ಬಂದಿಲ್ಲಾ, ದುಡ್ಡು ಬಂದಿಲ್ಲಾ ಎಂದು ಹೇಳುತ್ತೀರಲ್ಲಾ, ಅವರು ದುಡ್ಡನ್ನು ಏತಕ್ಕೆ ಕಳುಹಿಸಬೇಕು, ಒಂದು ಚೆಕಿಂಗ್ ಇಲ್ಲ, ಇನ್ಸ್‌ಪೆಕ್ಷನ್ ಇಲ್ಲ, ದುಡ್ಡನ್ನು ತೆಗೆದುಕೊಂಡು ಹೋಗುವುದು, ಅವರು ಎಷ್ಟು ಕೊಡುತ್ತಾರೆ ಇವರು ಎಷ್ಟೋ ತೆಗೆದುಕೊಂಡು ಹೋಗಿ ಕೊಡುತ್ತಾರೆ. ಪಾಪ, ಸಾಯುತ್ತಿರುವ ಜನರಿಗೆ ಸರಿಯಾಗಿ ಹಣವನ್ನು ಹಂಚದೆ ಈ ರೀತಿಯಲ್ಲಿ ದುರ್ವಿನಿಯೋಗ ಮಾಡಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಯಾರು ದುರ್ವಿನಿಯೋಗ ಮಾಡಿದ್ದಾರೆ .....

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ...

ಅಧ್ಯಕ್ಷರು.—ತಿಮ್ಮೇಗೌಡರೇ, ವೆಂಕಟರಾಮಯ್ಯನವರೇ, ಮೊದಲು ಅವರ ಉತ್ತರ ಮುಗಿಯಲಿ, ಆಮೇಲೆ ಬೇಕಾದರೆ ನೋಡೋಣ. ದೇಶಪಾಂಡೆಯವರೇ, ತಾವು ಉತ್ತರವನ್ನು...

ಶ್ರೀ ಆರ್. ವಿ. ದೇಶಪಾಂಡೆ.— ಎಲ್ಲಿಯತನಕ ಕೇಂದ್ರ ಸರ್ಕಾರದ ನಾರ್ಮ್ಸ್‌ಗಳು ಬದಲಾವಣೆ ಯಾಗುವುದಿಲ್ಲವೋ ಅಲ್ಲಿಯ ತನಕ ಇದನ್ನು ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಬಸವಲಿಂಗಪ್ಪ .—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ೪೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮಳೆ ಹಾವಳಿಗೋಸ್ಕರ ನಾವು ಕೇಳಿರುವುದು ೭೯ ಕೋಟಿ ರೂಪಾಯಿಗಳನ್ನು ಪ್ರಶಿಯೊಂದು ಐಟಿಂವೈಸ್ ಎಕ್ಸ್‌ಪೆಂಡಿಚರ್ ಯಾವುದಕ್ಕೆ ಹೋಗುತ್ತಿದೆ ? ಯಾವ ರೀತಿಯಲ್ಲಿ ಹಂಚಿಕೆ ನಡೆಯುತ್ತಿದೆ ಎಂಬ ಬಗ್ಗೆ ಸರಿಯಾದ ಅಂದಾಜು ಇಲ್ಲದೆ, ಅದನ್ನು ಸರಿಯಾದ ರೀತಿಯಲ್ಲಿ ಮಾಡದೇ ಹೋದರೆ ಕೇಂದ್ರ ಸರ್ಕಾರದಿಂದ ನಮಗೆ ಹಣ ಬರುವ ಪ್ರಶ್ನೆಯೇ ಬರುವುದಿಲ್ಲ. ನೀವು ಇವತ್ತು ೭೯.೬೧ ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ. ಆದರೆ ನೀವು ಇದುವರೆಗೂ ಕೂಡ ಫ್ಲಡ್ ಹ್ಯಾವೋಕ್‌ಗೋಸ್ಕರ ೪೫ ಲಕ್ಷ ರೂಪಾಯಿ ಮಾತ್ರ ಖರ್ಚು ಮಾಡಿದ್ದೀರಿ. ಮತ್ತೆ ಮಾನ್ಯ ನಗರಾಭಿವೃದ್ಧಿ ಸಚಿವರು ಈಗ ತಾನೇ ಹೇಳುತ್ತಿದ್ದರು, ಅಧಿಕಾರಿಗಳು ಇಲ್ಲಿಂದ ಹತ್ತಿರಹೋಗಿ ರಸೀತಿಯನ್ನು ತೆಗೆದುಕೊಂಡು ಹೋಗಿದ್ದಾರೆ, ದುಡ್ಡನ್ನು ಇನ್ನು ಕೊಟ್ಟಿಲ್ಲ ಎಂದು ಹೇಳುತ್ತಿದ್ದರು. ನಮ್ಮ ಕ್ಷೇತ್ರದಲ್ಲೂ ಕೂಡಾ ೧೮೦–೧೯೦ ರೂಪಾಯಿಯ ರೀತ್ಯಾ ಕೊಟ್ಟಿದ್ದಾರೆ. ಹೀಗೆ ೪೫ ಲಕ್ಷ ರೂಪಾಯಿ ಮಾತ್ರ ಖರ್ಚು ಮಾಡಿ ೭೯ ಕೋಟಿ ರೂಪಾಯಿಗಳನ್ನು ಕೇಂದ್ರಸರ್ಕಾರದಿಂದ ಕೇಳಿದರೆ ಯಾರು ಕೊಡುತ್ತಾರೆ ? ನ್ಯಾಯವಾಗಿ ೪೧ ಕೋಟಿ ರೂಪಾಯಿಗಳನ್ನು ಬರೀ ಕಾರ್ಪೊರೇಷನ್ ಏರಿಯಾದಲ್ಲಿ ಚರಂಡಿಗಳು, ಒಳ ಚರಂಡಿ ರಸ್ತೆ ಮಾಡಲಿಕ್ಕೆ ಯಾರು ಕೊಡುತ್ತಾರೆ ?

ಶ್ರೀ ಆರ್. ವಿ. ದೇಶಪಾಂಡೆ.—ಕೇಂದ್ರ ಸರ್ಕಾರದ ನಿಯಮಗಳು ಏನು ಇವೆ, ನಾರ್ಮ್ಸ್‌ಗಳು ಏನು ಇವೆ, ಅದರ ಪ್ರಕಾರವಾಗಿ ಮೆಮೊರಾಂಡಮ್‌ನ್ನು ಸಬ್‌ಮಿಟ್ ಮಾಡಬೇಕಾಗುತ್ತದೆ. ಇವತ್ತು ನಾರ್ಮ್ಸ್‌ಗಳ ಬಗ್ಗೆ ತಿಮ್ಮೇಗೌಡರು ಹೇಳಿದ ಹಾಗೆ ಬದಲಾವಣೆ ಆದ ಹಾಗೆ ಅದರ ಲಾಭ ನಮಗೂ ಸಿಗಬಹುದು. ಮುತ್ತು ಈ ವಿಷಯವಾಗಿ ಮಾನ್ಯ ಸದಸ್ಯರಾದ ಜಾರ್ಜ್‌ರವರು ಕೂಡ ಮಾತನಾಡುತ್ತಾ ಹೇಳಿದರು. ೪೯೦೦ ರೂಪಾಯಿಗಳಿಗಿಂತ ಯಾರಿಗೆ ವಾರ್ಷಿಕ ಪರಮಾನ ಹೆಚ್ಚಿಗೆ ಇದೆ. ಅವರಿಗೆ ನಾವ್ಯಾರೂ ಸಹಾಯವನ್ನು ಮಾಡಲಿಕ್ಕೆ ಬರುವುದಿಲ್ಲ. ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಐ.ಆರ್.ಡಿ.ಪಿ. ನಾರ್ಮ್ಸ್ ಏನು ಇದೆ ಅದನ್ನು ಅಡಾಪ್ಟ್ ಮಾಡಿ ಎಂದು ಹೇಳಿದ್ದೇವೆ. ಎಲ್ಲಿಯತನಕ ಕೇಂದ್ರಸರ್ಕಾರ ಇದನ್ನು ಬದಲಾವಣೆ ಮಾಡುವುದಿಲ್ಲವೋ ಅಲ್ಲಿಯತನಕ ಏನೂ ಮಾಡುವುದಕ್ಕಾಗುವುದಿಲ್ಲ. ನಮಗೂ ಸಹಾನುಭೂತಿ ಕಳಕಳಿ ಎಲ್ಲಾ ಇದೆ. ಇದನ್ನು ಎಂಟು ಸಾವಿರ ರೂಪಾಯಿಗಳವರೆಗೂ ಹೆಚ್ಚು ಮಾಡಬೇಕು ಎನ್ನುವ ಒಂದು ಮನೋಭಾವನೆ ನಮಗೆ ಇದ್ದರೂ ಕೂಡಾ ಸರ್ಕಾರ ಕಾಯ್ದೆ ಕಾನೂನು ಒಳಗಡೆ ಕೆಲಸವನ್ನು ಮಾಡಬೇಕಾಗುತ್ತದೆ. ಕಾಯ್ದೆ ಕಾನೂನನ್ನು ಬಿಟ್ಟು ಯಾರೂ ಕೆಲಸ ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ.....

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೇ ಈ ರೀತಿ ಆದರೆ ಆಗುವುದಿಲ್ಲ. ನಾನು ಉತ್ತರವನ್ನು ಹೇಳುವುದಿಲ್ಲ.

ಅಧ್ಯಕ್ಷರು.—ಜಾರ್ಜ್‌ರವರೇ ತಾವು ದಯವಿಟ್ಟು ಕೂಡ್ರಿ. ಅವರು ಉತ್ತರವನ್ನು ಹೇಳಲಿ. ಯಾರೂ ಸಹ ಇಂಟರ್‌ಫಿಯರ್ ಮಾಡಕೂಡದು. ಆಮೇಲೆ ಬೇಕಾದರೆ ತಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.— ನಾನು ಕೇಂದ್ರ ಸರ್ಕಾರದ ಮೇಲೆ ಆಪಾದನೆಯನ್ನು ಮಾಡಂತಿಲ್ಲ. It is the norms all over the country. ನಮ್ಮ ರಾಜ್ಯ ಸರ್ಕಾರದ ಅಸೆಸ್‌ಮೆಂಟ್ ಸಮಿತಿ ಇಲ್ಲ. ಆ ನಾರಂಸ್ ಅನ್ನು ಕೇಂದ್ರ ಸರ್ಕಾರ ಎಲ್ಲಿಯವರೆಗೆ ಛೇಂಜ್ ಮಾಡಂವುದಿಲ್ಲ ಅಲ್ಲಿಯ ತನಕ ನಮಗೆ ಯಾವುದೇ ತರಹ ಸಹಾಯ Income above 4800 ನವಗೆ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಸಹ ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. 4800 IRDP identification - ಮಾಡಿ ಎಂದು. ಆ ಪ್ರಕಾರ ಹೆಚ್ಚಿನ ಜನರಿಗೆ ಸಹಾಯ ಮಾಡುವುದಕ್ಕೆ ಸಹಾಯ ಆಗಬಹುದು. ಆದರೂ ಸಹ ಇವೊತ್ತು ಎಲ್ಲೆಲ್ಲಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೪೭ ಲಕ್ಷ ರೂ. ಗಳು...

ಅಧ್ಯಕ್ಷರು.—ಖರ್ಗೆಯವರೇ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಅವರು ಮುಕ್ತಾಯ ಮಾಡಲಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ನಾನು ಮುಖ್ಯವಾದ ಪ್ರಶ್ನೆ ಎತ್ತುತ್ತಿದ್ದೇನೆ...

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ,...

ಅಧ್ಯಕ್ಷರು.—ನಿಮ್ಮ ಲೀಡರ್‌ಗೆ ನೀವು ಸಹಕಾರ ಮಾಡುವುದಿಲ್ಲ. ನಿಮ್ಮ ಲೀಡರ್‌ಗೆ ಸಹಕಾರ ಕೊಡುವುದಿಲ್ಲ ಎಂದರೆ ಬೇರೆಯವರಿಗೆ ನೀವು ಸಹಕಾರ ಕೊಡುತ್ತೀರೇನು ? ನಿಮ್ಮ ಲೀಡರ್ ಬಗ್ಗೆ ನಿಮಗೆ ಸಹಾನುಭೂತಿ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಕೇವಲ ೪೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವಾಗ ಗವರ್ನಮೆಂಟ್ ಆಫ್ ಇಂಡಿಯಾ ರೀ-ಇಂಬರ್ಸ್ ಮಾಡುವುದಕ್ಕೆ ಸಾಧ್ಯವೇ ? ಅಥವಾ ಅಸಿಸ್ಟೆನ್ಸ್ ಕೂಡುವ ಪ್ರಶ್ನೆಯೇ ಬರುವುದಿಲ್ಲ. ನಿಮಗೆ ಅವಶ್ಯಕತೆ ಇದ್ದಷ್ಟು ಖರ್ಚು ಮಾಡುತ್ತಿರೆಂದು ಅವರು ಕೌಂಟ್ ಮಾಡುತ್ತಾರೆ. ತಾವು ಪೇಪರ್‌ನಲ್ಲಿ ಓದಿರಬಹುದು. ನಮ್ಮ ಪ್ರಧಾನ ಮಂತ್ರಿಯವರು ಅಸ್ಸಾಂಗೆ ಹೋದಾಗ they asked Rs. 100 crores. ಆಗ ಎಕ್ಸ್‌ಪೆಂಡಿಚರ್ ತೆಗೆದು ನೋಡಿದರು. when he discussed with the officers. ಅವರು ಖರ್ಚು ಮಾಡಿದ್ದು ೨೦ ಕೋಟಿ ರೂಪಾಯಿಗಳು ಮಾತ್ರ ೨೦ ಕೋಟಿ ರೂಪಾಯಿ ಇವತ್ತು ನೀವು ಖರ್ಚು ಮಾಡಿದ್ದೀರಿ, ಕೊನೆಗೆ ೨೦ ಕೋಟಿ ರೂಪಾಯಿಗಳನ್ನು ಮಾತ್ರ ರೀ ಇಂಬರ್ಸ್ ಮಾಡುತ್ತೇವೆ ಅಂದರೆ Further, the team will come and examine and they will give ಎಂದು ಹೇಳಿದರು. ಹಾಗೆ ನೀವು ಇವೊತ್ತು ಕನಿಷ್ಟ ಪಕ್ಷ ೧೦ ಕೋಟಿ ರೂಪಾಯಿ ಅಥವಾ ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ೫೦ ಅಥವಾ ೬೦ ಕೋಟಿ ರೂಪಾಯಿ ಕೇಳಿದರೆ ಟೀಮ್ ಬಂದಿರಂವವರು ಎಕ್ಸಾಮಿನ್ ಮಾಡಿ ಎಷ್ಟು ಖರ್ಚು ಮಾಡಿದ್ದೀರಿ, ಅಟ್‌ಲೀಸ್ಟ್ ಅಷ್ಟನ್ನು ರೀ ಇಂಬರ್ಸ್ ಮಾಡಿ ಎಂದು ಉಳಿದಿದ್ದನ್ನು we will reimburse. That is the point. ನೀವು ೪೭ ಲಕ್ಷ ರೂಪಾಯಿ ಖರ್ಚು ಮಾಡಿ ೯೦ ಕೋಟಿ ರೂಪಾಯಿ ಕೊಡಿ ಎಂದರೆ ಯಾರು ಕೊಡುತ್ತಾರೆ ? ತಮ್ಮಲ್ಲಿ ಜಿಲ್ಲಾ ಪರಿಷತ್‌ನವರು ಹೇಳಿದ ಹಾಗೆ. ೫೨ ಕೋಟಿ ರೂಪಾಯಿಗಳ ಲುಕ್ಸಾನು ಆಗಿದೆ ಎಂದಂ ಅವರು ಕೇಳಿದ್ದಕ್ಕೆ. ಹಾಗೂ ಅವರು ೭ ಕೋಟಿ ರೂಪಾಯಿ ಕೇಳಿದ್ದಕ್ಕೆ ನೀವು ರೀ ಇಂಬರ್ಸ್ ಮಾಡಿದ್ದು ಎರಡು ಲಕ್ಷ ರೂಪಾಯಿಗಳು. ಹಾಗೆ ಆಗುತ್ತದೆ ಇದು ಕೂಡ.

ಶ್ರೀ ಆರ್. ವಿ. ದೇಶಪಾಂಡೆ.—ಆ ವಾದವನ್ನು ಒಪ್ಪಿಕೊಳ್ಳುವುದಕ್ಕೆ ನಾವು ತಯಾರು ಇಲ್ಲ. This is not a fact ಯಾಕೆಂದರೆ ಪ್ರಶ್ನೆ ಏನು ಅಂದರೆ ೭೯ ಕೋಟಿ ರೂಪಾಯಿಗಳನ್ನು ಕೇಳಿದ್ದು ಬ್ರಿಡ್ಜಸ್ ಡ್ಯಾಮೇಜ್‌ಗೆ, ರೋಡ್ಸ್ ಡ್ಯಾಮೇಜ್‌ಗೆ, ಡ್ರೈನೇಜ್ ಡ್ಯಾಮೇಜ್‌ಗೆ, ನಾವು ಕೇಳಿದ್ದು

ಇವೊತ್ತಿನ ದಿವಸ ೧೫ ದಿವಸದೊಳಗೆ ೧೫ ಅಥವಾ ೨೦ ಕೋಟಿ ರೂಪಾಯಿಗಳನ್ನು ಬ್ರಿಡ್ಜ್ ಮೇಲೆ, ರೋಡ್ ಮೇಲೆ, ಡ್ರೈನೇಜ್ ಮೇಲೆ ಖರ್ಚು ಮಾಡುವುದಕ್ಕೆ ಸಾಧ್ಯ ಇದೆಯೇ ? ಯಾರು ಮಾಡುತ್ತಾರೆ ಹೇಳಿ. ಹೀಗೆ ಹಂಚುವುದಕ್ಕಾಗಿ ಈ ರೀತಿ ಮಾಡಲಾಗುತ್ತಿದೆಯೇ ? Are you distributing this money ? Please co-operate.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.–You have to give the relief. ಹಂಚುವ ಪ್ರಶ್ನೆ ಎಲ್ಲಿ ಬಂತು. ಎಲ್ಲೆಲ್ಲಿ ರಿಲೀಫ್ ಕೊಡುತ್ತಾರೆ ಅಲ್ಲಿ...

ಅಧ್ಯಕ್ಷರು.—ಮಂತ್ರಿಗಳು ಮುಕ್ತಾಯ ಮಾಡಲಿ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಸೆಪ್ಟೆಂಬರ್ ೯ ರಿಂದ ೧೮ ರವರೆಗೆ ಭಾರಿ ಮಳೆ ಆಗಿದೆ ಈಗ ಇಮ್ಮಿಡಿಯೇಟ್ ಆಗಿ ರಿಲೀಫ್ ಹೇಗೆ ಕೊಡಬೇಕು, ಎಲ್ಲಿ ಡೆತ್ ಆಗಿದೆ, ಎಲ್ಲಿ ಮನೆಗಳು ಬಿದ್ದಿವೆ, ಅಲ್ಲಿ ನಾವು ಖರ್ಚು ಮಾಡಿದ್ದೇವೆ. ಈಗ ಜಾರ್ಜ್ ಅವರು ಹೇಳಿದರು. ಇದನ್ನು ಅವರೂ ಒಪ್ಪಿಕೊಂಡರು.

ಶ್ರೀ ಕೆ. ಜೆ. ಜಾರ್ಜ್.—ಅವರು ನನ್ನ ಮೇಲೆ ಹೇಳುತ್ತಿದ್ದಾರೆ.

ಅಧ್ಯಕ್ಷರು.—ಅವರು ಉತ್ತರ ಹೇಳುತ್ತಿದ್ದಾರೆ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ, ತಡೆಯಿರಿ.

ಶ್ರೀ ಆರ್. ವಿ. ದೇಶಪಾಂಡೆ.—ಬೆಂಗಳೂರಿನ ಲಕ್ಷ್ಮೀಪುರದಲ್ಲಿ ೭೦ ಜನರಿಗೆ ಎರಡು ಸಾವಿರದ ಪ್ರಕಾರ ಕೊಟ್ಟಿದ್ದೇವೆ.

ಶ್ರೀ ಕೆ. ಜೆ. ಜಾರ್ಜ್.—ಅಧ್ಯಕ್ಷರೇ, ಒಂದು ಕಡೆ ಸಾವಿರ ಮನೆಗೆ ಕಾರ್ಪೊರೇಷನ್ ಹಣ ಕೊಟ್ಟಿದೆ ಎಂದು ಹೇಳಿದರು ಆದರೆ ಕಾರ್ಪೊರೇಷನ್ ಕೊಟ್ಟಿರುವುದು ೭೦ ಮನೆಗಳಿಗೆ.

ಅಧ್ಯಕ್ಷರು.—ನೀವು ಇಂಟರ್‌ಫಿಯರ್ ಮಾಡಿದರೆ ಮಂತ್ರಿಗಳು ಉತ್ತರ ಹೇಗೆ ಕೊಡಬೇಕು ? ಹೀಗೆ ಮಾಡಿದರೆ ನೆಕ್ಸ್ಟ್ ಪಂಪಾಪತಿಯವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಇಡೀ ರಾಜ್ಯದಲ್ಲಿ ನಾವು ಜಿಲ್ಲಾ ಪರಿಷತ್‌ಗಳಿಗೆ ಡಿ. ಸಿ. ಗಳಿಗೆ ಹಾಗೂ ಕಾರ್ಪೊರೇಷನ್‌ಗಳಿಗೆ ಆದೇಶ ಕೊಟ್ಟಿದ್ದೇವೆ. ಯಾವ ಭಾಗದಲ್ಲಿ ಎಲ್ಲೆಲ್ಲಿ ಮನೆಗಳು ಬಿದ್ದಿವೆ, ಪಾರ್ಟಿಯವರು ಆರ್ ಫುಲ್ಲಿ ಅವರಿಗೆ ಸಹಾಯ ಮಾಡಬೇಕು ಎಂದು ಗೌರ್ನಮೆಂಟ್‌ನಿಂದ ಹಣ ರಿಲೀಸ್ ಆಗುವುದು ಆಗಿದೆ. ಅಷ್ಟೇ ಅಲ್ಲ, ಇವೊತ್ತು ಬೆಂಗಳೂರು ನಗರದಲ್ಲಿ ಖರ್ಚು ಮಾಡಿರುವ entire money, the Bangalore City Corporation have spent i. e. their money. ಕಾರ್ಪೊರೇಷನ್ ಖರ್ಚು ಮಾಡಿದರೆ ಸರ್ಕಾರ ಹಣ ಕೊಡುವುದಿಲ್ಲ ಎಂದು ಅಲ್ಲ. ಎಲ್ಲೆಲ್ಲಿ ಡೆತ್ ಆಗಿದೆ, ಎಲ್ಲೆಲ್ಲಿ ರಿಲೀಫ್ ಕೊಡಬೇಕಾಗಿದೆ ಎಲ್ಲಿ ಮಳೆಯಿಂದ ಮನೆಗಳು ಬಿದ್ದಿವೆ ಅಲ್ಲಿ we have instructed the officers. ಅಲ್ಲಿ ಇಮ್ಮಿಡಿಯಟ್ ಆಗಿ ಈಗಾಗಲೇ ಕೆಲಸ ಶುರು ಆಗಿದೆ. ಇವೊತ್ತು ಬೆಂಗಳೂರು ನಗರಕ್ಕೆ ಮೆಟೀರಿಯಲ್ಸ್ ಅನ್ನು ಡಿಸ್ಟ್ರಿಬ್ಯೂಷನ್ ಮಾಡಿದ್ದೇವೆ. ಅದೇ ಪ್ರಕಾರ ರಾಜ್ಯದ ಬೇರೆ ಬೇರೆ ಭಾಗದಲ್ಲಿ ಮನೆಗಳು ಎಲ್ಲೆಲ್ಲಿ ಬಿದ್ದಿವೆ, ಅಲ್ಲೆಲ್ಲಾ ಸರ್ಕಾರ ಕೈವಶ ತೆಗೆದುಕೊಳ್ಳಲಿದೆ. ಇವೊತ್ತು ಸಾಧಾರಣವಾಗಿ ಇಡೀ ರಾಜ್ಯದಲ್ಲಿ ಮಳೆ ಬಂದು ಬೆಳೆ ಹಾಳಾಗಿದೆ. ಅಲ್ಲಿ ಏನು ಆಗಿದೆ ಅಂದರೆ ರೈತರ ದುರ್ದೈವ ಅಥವಾ ಕೇಂದ್ರ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಸಾಧ್ಯ ಇಲ್ಲವೋ ಅಲ್ಲಿ ಏನು ಆಗಿದೆ ಅಂದರೆ ಖಾರೀಫ್ ಬೆಳೆಗೆ ಇನ್‌ಶೂರೆನ್ಸ್ ಇನ್ನೂ ಜಾರಿಗೆ ಬಂದಿಲ್ಲ. ನಾವು ಕೇಂದ್ರ ಸರ್ಕಾರದ ಮೇಲೆ ಸಾಕಷ್ಟು ಒತ್ತಾಯ ಮಾಡುತ್ತಿದ್ದೇವೆ. ಕ್ರಾಪಿಂಗ್ ಇನ್‌ಶ್ಯೂರೆನ್ಸ್ ನಾವು ಬಂದ್ ಮಾಡಿದರೆ ರೈತರಿಗೆ ಸಾಕಷ್ಟು ಕೊಂದರೆ ಆಗಬಹುದು. ಇವೊತ್ತು ಎಲ್ಲಾ ತಾಲ್ಲೂಕುಗಳನ್ನು ಮಂಡಲ್ ಎಂದು ನೋಟಿಫೈ ಮಾಡಿ ಎಂದು ನಾನು ಶ್ರೀ ಭಜನ್‌ಲಾಲ್ ಅವರಿಗೆ ಹೇಳಿದೆ. ಅವರು ಒಂದು ಸ್ಟೆಪ್ ಫರ್ದರ್ ಹೋದರು. ಅವರು ರೈತರ ಪ್ರತಿನಿಧಿ. ನಾನು village as a Mandal ಎಂದು ಮಾಡುತ್ತೇನೆಂದು ಹೇಳಿದರು. ಬಹಳ ಸಂತೋಷ ಆದರೆ ದುರ್ದೈವದಿಂದ ಏನಾಯಿತು ಅಂದರೆ, ನಾನು ಕೃಷಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಅವರು ಖರೀಫ್‌ಲ್ಲಿ ನೋಟಿಫೈ ಮಾಡಬೇಡಿ ಎಂದು ಹೇಳಿದರು. ಕ್ರಾಪಿಂಗ್ ಇನ್‌ಶ್ಯೂರೆನ್ಸ್ ನೋಟಿಫೈ ಮಾಡುವುದಕ್ಕೆ ಸಾಧ್ಯ ಆಗಿಲ್ಲ. ಆದ್ದರಿಂದ ರಾಜ್ಯದಲ್ಲಿ ಬೆಳೆ ಹಾಳಾಗಿದೆ. ಯಾವುದೇ ರೀತಿಯ ಕಾಂಪೆನ್‌ಸೇಷನ್

ಮಾಡುವುದಕ್ಕೆ ಸಾಧ್ಯ ಇಲ್ಲ. ಸಣ್ಣ ರೈತರಿಗೆ ಬೀಜ, ಗೊಬ್ಬರ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಈಗಾಗಲೇ ಇದರ ಬಗ್ಗೆ ಅಸೆಸ್‌ಮೆಂಟ್ ಅನ್ನು ಸರ್ಕಾರ ಮಾಡುತ್ತಿದೆ. ಈ ಸಲ ಜಾಸ್ತಿ ಮಳೆಕಾರಣ ರೈತರ ಬೆಳೆಯೆಲ್ಲಾ ಹಾಳಾಯಿತು. ಕೇಂದ್ರ ಸರ್ಕಾರದ ಧೋರಣೆಯಿಂದ ಮತ್ತು ನೀತಿಯಿಂದ ಈ ಬಗ್ಗೆ ನಾವು ರೈತರಿಗೆ ಯಾವ ಒಂದು ಸಹಾಯವನ್ನೂ ಮಾಡುವುದಕ್ಕೆ ನಮಗೆ ಸಾಧ್ಯವಾಗಲಿಲ್ಲ. ಕೇಂದ್ರದ ಧೋರಣೆ ಬದಲಾಗದಿದ್ದರೆ ರೈತರಿಗೆ ಬೆಳೆ ನಾಶದ ಬಗ್ಗೆ ಪರಿಹಾರ ಸಿಗುತ್ತಿತ್ತು. ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುವಾಗ ಅತಿವೃಷ್ಟಿ ಸಂಬಂಧದಲ್ಲಿ ಸರ್ಕಾರ ಪ್ರಾಮಾಣಿಕವಾದ ಕೆಲಸ ಮಾಡಿಲ್ಲ ಬಹಳ ಜನರುಕಾಗಿ ಕೆಲಸ ಮಾಡಿಲ್ಲ ಎಂದು ಹೇಳಿದ್ದಾರೆ. ಆದರೆ ಸರ್ಕಾರ ಅತಿ ಹೆಚ್ಚಿನ ಜವಾಬ್ದಾರಿಯಿಂದ ಎಷ್ಟು ಜನರಿಗೆ ಸಹಾಯ ಮಾಡುವುದನ್ನು ಸಾಧ್ಯವೋ ಅಷ್ಟು ಜನರಿಗೆ ಸಹಾಯ ಮಾಡಿದೆ ಇನ್ನೂ ಮಾಡಬೇಕಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಎಲ್ಲವೂ ಸರಿಯಾಗಿ ನಡೆಯುತ್ತಿದೆ ಎಂದು ನಾನು ಹೇಳುವುದಿಲ್ಲ. ಅಲ್ಲಲ್ಲಿ ಲೋಪದೋಷಗಳಿರಬಹುದು. ಈ ಬಗ್ಗೆ ಮಾನ್ಯ ಸದಸ್ಯರು ಗಳು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ, ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ. ನಾನು ಈಗಾಗಲೇ ಹೇಳಿದಂತೆ ಕೇಂದ್ರಕ್ಕೆ ನಾವು ಸಪ್ಲಿಮೆಂಟರಿ ಮೆಮೊರಾಂಡಮ್‌ನ್ನು ಸಬ್‌ಮಿಟ್ ಮಾಡುತ್ತೇವೆ. ಇದಕ್ಕೆ ಸಂಬಂಧಪಟ್ಟಂತೆ ಆಯಾ ಜಿಲ್ಲೆಯ ಎಂ. ಪಿ. ಗಳನ್ನು ಮತ್ತು ಶಾಸಕರನ್ನು ಕನ್‌ಸಲ್ಟ್ ಮಾಡಿ ವಿವರಗಳನ್ನು ಕಳುಹಿಸಿಕೊಡಬೇಕೆಂದು ನಾವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಅವರಿಂದ ವಿವರಗಳು ಬಂದನಂತರ ಸಪ್ಲಿಮೆಂಟರಿ ಮೆಮೊರಾಂಡಮ್‌ನ್ನು ಕಳುಹಿಸಿ ಕೊಡುತ್ತೇವೆ. ಇದರ ಜೊತೆಗೆ ನಾನು ಸಹ ಇನ್ನೇ ತಾರೀಖು ದೆಹಲಿಗೆ ಹೋಗುತ್ತಿದ್ದೇನೆ ಈ ಬಗ್ಗೆ ಅಧ್ಯಯನ ಮಾಡಲು ಸೆಂಟ್ರಲ್ ಟೀಮ್ ಅದಷ್ಟೂ ಬೇಗ ಇಲ್ಲಿಗೆ ಬರಬಹುದು. ಒಟ್ಟಿನಲ್ಲಿ ಈ ಸದನದ ಎಲ್ಲ ಸದಸ್ಯರ ಸಹಕಾರದಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಅವರ ಒಂದಂ ಸಹಕಾರದಿಂದ ರಾಜ್ಯಸರ್ಕಾರ ಈ ಬಾಬಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಬಹುದೋ ಅಷ್ಟೂ ಹಣವನ್ನು ಬಿಡುಗಡೆ ಮಾಡುತ್ತದೆ ಎಂಬ ಭರವಸೆಯನ್ನು ಕೊಟ್ಟು ನನ್ನ ಮಾತನ್ನು ಮುಂಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದಂತೆ ನಮ್ಮ ಭಾಗದಲ್ಲಿ ಪರಿಹಾರದ ಹಣವನ್ನು ರೆವಿನ್ಯೂ ಇನ್‌ಸ್ಪೆಕ್ಟರ್ ಅವರು ತಿಂದುಹಾಕಿದ್ದರೂ ಸಹ ಅದನ್ನು ನೋಡಿಕೊಂಡು ಅಸಿಸ್ಟೆಂಟ್ ಕಮೀಷನರ್ ಅವರು ಸುಮ್ಮನಿದ್ದಾರೆ. ಆದ್ದರಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟವರನ್ನೆಲ್ಲಾ ತಾವು ಕರೆಸಿ ವಿಚಾರಣೆ ಮಾಡಬೇಕು ಮತ್ತು ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಿದ್ದೇ ಆದರೆ, ನೀವು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೀರಿ ಎಂದು ಹೇಳಬಹುದು. ಅದನ್ನು ಬಿಟ್ಟು ನೀವು ಬರೀ ಬಾಯಲ್ಲಿ ಹೇಳಿದರೆ ಆಗುವುದಿಲ್ಲ ನೊಂದವರಿಗೆ ದೊರಕಬೇಕಾಗಿದ್ದ ೨೦೦ ರೂಪಾಯಿಗಳನ್ನು ಅವರೇ ತಿಂದುಕೊಂಡು, ಖಾಲಿ ಹಾಳೆಯ ಮೇಲೆ ಅವರ ಹಸ್ತಿರ ಸಹಿ ಮಾಡಿಸಿಕೊಂಡು, ಚೀಟಿಗಳನ್ನು ಕೊಟ್ಟಿದ್ದಾರೆ. ಹಣ ಮಾತ್ರ ಅವರಿಗೆ ಸಿಕ್ಕಿಲ್ಲ. ಇದಕ್ಕೆ ಸಂಬಂಧ ಪಟ್ಟ ಕಾಗದಪತ್ರಗಳನ್ನು ನಾನಂ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಇದರ ಬಗ್ಗೆ ಅವರು ತನಿಖೆ ಮಾಡಿಸಲಿ.

ಶ್ರೀ ಆರ್. ವಿ. ದೇಶಪಾಂಡೆ.—ಇದರ ಬಗ್ಗೆ ನಾನು ತನಿಖೆ ಮಾಡಿಸಿ ಸೂಕ್ತ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾವು ಪ್ರಸ್ತಾಪ ಮಾಡಿದ ಅನೇಕ ಪ್ರಮುಖ ವಿಷಯಗಳಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಲೇ ಇಲ್ಲ. ಇವರಂ ಮಾರ್ಜಿನ್ ಮನಿ ಖರ್ಚು ಮಾಡಿರಬಹುದು. ಆದರೆ ಅದು ಅಷ್ಟು ಮುಖ್ಯವಲ್ಲ. ಅತಿವೃಷ್ಟಿ ಸಂಬಂಧದಲ್ಲಿ ಶೇ ಪರ್ಸೆಂಟ್ ಹಣವನ್ನು ಪ್ರತ್ಯೇಕವಾಗಿ ತೆಗೆದಿಟ್ಟಿರುತ್ತಾರೆ. ನಿಯಮದ ಪ್ರಕಾರ ಪ್ರತಿವರ್ಷವೂ ಇದಕ್ಕಾಗಿ ಮಾರ್ಜಿನ್—ಮನಿ ಎಂದು ಶೇ ಪರ್ಸೆಂಟ್ ಹಣವನ್ನು ತೆಗೆದಿಟ್ಟಿರುತ್ತಾರೆ. ಅತಿವೃಷ್ಟಿಯಿಂದ ಆದಂಥ ಹಾನಿಯ ಸಲುವಾಗಿ ಈ ಹಣವನ್ನು ಖರ್ಚು ಮಾಡಿರಬಹುದು. ಆದರೆ ಅದು ಮುಖ್ಯವಲ್ಲ, ಇಂಥಾದ್ದು ಸಂಭವಿಸಿದಾಗ ಸರ್ಕಾರ ಎಷ್ಟು ಖರ್ಚು ಮಾಡುತ್ತದೆಂಬುದು ಮುಖ್ಯ. ಮಾತುಮಾತಿಗೂ ನೀವು ಮಾರ್ಜಿನ್—ಮನಿ ಖರ್ಚು ಮಾಡಿದ್ದೇವೆಂದು ಹೇಳುವುದು ಸರಿಯಲ್ಲ. ಸರ್ಕಾರದ ಪರವಿಯಿಂದ ಎಷ್ಟು ಹಣ ಖರ್ಚು ಮಾಡಿದ್ದೀರೆಂಬುದನ್ನು ತಾವು ನಮಗೆ ತಿಳಿಸಬೇಕು. ಇದಕ್ಕೆ ಹಣ ಎಲ್ಲಿಂದ ತರುವುದೆಂದು ತಾವು ನಮ್ಮನ್ನೇ ಕೇಳಬಹುದು. ಇಂತಹ ಸಮಯದಲ್ಲಿ ನೀವು ಬೇರೆ ಕೆಲಸಗಳನ್ನೆಲ್ಲಾ ನಿಲ್ಲಿಸಿ ಈ ಬಾಬಿಗೆ ಹಣ ಖರ್ಚು ಮಾಡಬೇಕಾಗುತ್ತದೆ. ನೀವು ಹತ್ತು ಕೋಟಿಯೋ ಅಥವಾ ಇಪ್ಪತ್ತು

ಕೋಟಿಯೋ ಖರ್ಚು ಮಾಡಿದರೆ, ಅದನ್ನು ಅಸೆಸ್ ಮಾಡಿಕೊಂಡು ಕೇಂದ್ರ ಸರ್ಕಾರದವರು ನಿಮಗೆ ಸಹಾಯ ಮಾಡುತ್ತಾರೆ.

ಅಧ್ಯಕ್ಷರು.—ಮಾನ್ಯ ದೇಶಪಾಂಡೆಯವರೇ, ಅವರು ಹೇಳಿರುವುದನ್ನು ಕೇಳಿ. ಮೊದಲೇ ನೀವು ಹಣ ಖರ್ಚು ಮಾಡಿದರೆ, ನಂತರ ಕೇಂದ್ರಸರ್ಕಾರದವರು ಹಣ ಕೊಡುತ್ತಾರೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲ ಕಡೆಯೂ ಇದೇರೀತಿ ಮಾಡುತ್ತಾರೆ. ನೀವು ಪರ್ಚೇಜಿನ್ ಮನಿ ಖರ್ಚು ಮಾಡಿರುವುದಕ್ಕೂ ಕೇಂದ್ರ ಸರ್ಕಾರಕ್ಕೂ ಸಂಬಂಧವಿಲ್ಲ. ಇದರ ಮೇಲೆ ನೀವು ಎಷ್ಟು ಹಣ ಖರ್ಚು ಮಾಡಿದ್ದೀರೆಂಬುದು ಮುಖ್ಯ. ಕೇಂದ್ರದಿಂದ ಹಣ ಬರುವವರೆಗೆ how much amount are you going to release district-wise for various items which you have claimed ? ಇದನ್ನು ತಾವು ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಈಗಾಗಲೇ ಹೇಳಿದಂತೆ ಮೂರು ಕೋಟಿ ರೂಪಾಯಿಗಳ ಮಾರ್ಜಿನ್ ಮನಿ ಅನ್ನು ಬಿಡುಗಡೆ ಮಾಡಿದ್ದೇವೆ. ಇದನ್ನು ಕೇಂದ್ರ ಸರ್ಕಾರದ ಗಮನಕ್ಕೂ ತಂದಿದ್ದೇವೆ. We have submitted the accounts and requested the Government of India to release the money. Secondly, Corporations and Zilla Parishads, we have given instructions. ನೀವು ಬೇರೆ ಕೆಲಸಗಳನ್ನು ನಿಲ್ಲಿಸಿ ಈ ಕೆಲಸಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು, ನೀವು ಹಣ ಖರ್ಚು ಮಾಡಿದ ಮೇಲೆ ಅದನ್ನು ಸರ್ಕಾರ ವಾಪಸ್ ಕೊಡುತ್ತದೆ ಎಂದು ಅವರಿಗೆ ಹೇಳಿದ್ದೇವೆ. ಮತ್ತೆ ಮೂರನೆಯದಾಗಿ ಸರ್ಕಾರ ಬೇರೆಬೇರೆ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಕೊಟ್ಟಿದೆ ಎಂದು ಕೇಳಿದ್ದಾರೆ. ಇದರ ಬಗ್ಗೆ ನಿರ್ದಿಷ್ಟವಾಗಿ ಹೇಳೋವುದಕ್ಕಾಗುವುದಿಲ್ಲ ಆದರೆ ಆದಷ್ಟೂ ಬೇಗ ಪ್ರತಿ ಜಿಲ್ಲೆಗೂ ಹಣವನ್ನು ಬಿಡುಗಡೆ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—Natural calamity ಸಂಬಂಧದಲ್ಲಿ we should know what definite relief you are going to give.

ಅಧ್ಯಕ್ಷರು.—೩ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಅವರು ಹೇಳಿದ್ದಾರೆ. ಪಂಚಾಯತ್ ಈ ಸಂಬಂಧ ಜಿಲ್ಲಾ ಪರಿಷತ್ತುಗಳಿಗೆ ಆದೇಶ ನೀಡಿದ್ದೇವೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಸಂಬಂಧದಲ್ಲಿ ಮಾನ್ಯ ಮಂತ್ರಿಗಳು ಆರ್ಥಿಕ ಇಲಾಖೆಯವರನ್ನು, ವ್ಯವಸಾಯ ಇಲಾಖೆಯವರನ್ನು, ಕಂದಾಯ ಇಲಾಖೆಯವರನ್ನು, ಲೋಕೋಪಯೋಗಿ ಇಲಾಖೆಯವರನ್ನು ಕರೆಸಿ ಚರ್ಚೆ ಮಾಡಿ, ಜಿಲ್ಲಾವಾರು ಎಷ್ಟೆಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ ಎಂಬುದನ್ನು ತಿಳಿದುಕೊಂಡು ನಂತರ ಇಲ್ಲಿ ಬಂದು ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ಅದನ್ನು ಬಿಟ್ಟು ಇಲ್ಲಿ ನೀವು ಏನು ಬೇಕಾದರೂ ಮಾತನಾಡಿ, ನಾವು ಏನು ಬೇಕಾದರೂ ಉತ್ತರ ಕೊಡುತ್ತೇವೆ, ನಂತರ ನೀವು ಮನೆಗೆ ಹೋಗಿ ಎಂದು ಹೇಳುವುದು ಸರಿಯೇ ? ನಮಗೆ ಸರಿಯಾದ ಉತ್ತರ ಬೇಕು. What definite relief you are going to give is important.

SRI R.V. DESHPANDE.—I know your sentiments. I know you are serious about it. The Government is also serious about it. We will take you into confidence and do the work.

SRI M. MALLIKARJUNA KHARGE.—Why don't you ask the Finance Department to release this amount ?

SRI R.V. DESHPANDE.— The Chief Minister had several rounds of discussion.

SRI M. MALLIKARJUNA KHARGE He has no time.

SRI R.V. DESHPANDE.—You cannot say like that. ಮಾನ್ಯ ಪಂಚಾಯತ್ ಮಂತ್ರಿಗಳು ಅದರ ಬಗ್ಗೆ ಮೀಟಿಂಗ್ ಮಾಡಿದ್ದಾರೆ. ಆಫೀಸ್ ಅಲ್ಲ ಬ್ಯಾಂಕಿಂಗ್ ಇನ್‌ಸ್ಪೆಕ್ಷನ್ಸ್

ನವರನ್ನು ಕರೆದಿದ್ದೇವೆ. ಅವರ ಜೊತೆಗೆ ವಿಾಟಿಂಗ್ ಮಾಡಿದ್ದೇವೆ. ಅವರಿಗೆ ಬಿಸಿನೆಸ್ ಲಾಸ್ ಆಗಿದೆ. ಯಾರ ಮನೆ ಹೋಗಿದೆ ಅವರಿಗೆ ಲೋನ್ ಕೊಡಲಿಕ್ಕೆ ಬ್ಯಾಂಕ್‌ಗೆ ಹೇಳಿದ್ದೇವೆ. ಲೀಡ್ ಬ್ಯಾಂಕ್‌ಗಳಿಗೆ ಅರ್ಜಿ ಕಳಿಸಿದ್ದೇವೆ. ಮುಖ್ಯ ಮಂತ್ರಿಗಳ ಲೆವೆಲ್‌ನಲ್ಲಿ ಮತ್ತು ನಮ್ಮ ಲೆವೆಲ್‌ನಲ್ಲಿ ವಿಾಟಿಂಗ್ ಮಾಡುತ್ತಾ ಇದ್ದೇವೆ. ಅಷ್ಟೇಅಲ್ಲ ಇನ್ನು ಮುಂದೆಯೂ ಸಹ ತಮ್ಮ ಸರಕಾರದಿಂದ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ.

ಶ್ರೀ ಕೆ.ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರಿಗೆ ಅಭಿನಂದಿಸುತ್ತೇನೆ. ಏಕೆಂದರೆ ಡ್ರೈನ್ ಪಕ್ಕದಲ್ಲಿರುವವರಿಗೆ ಬೇರೆ ಕಡೆ ಸೈಟ್ ಕೊಡುತ್ತೇವೆ. ಅವರನ್ನು ಅಲ್ಲಿಂದ ಶಿಫ್ಟ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಇನ್ನೊಂದು ವಿಚಾರ ಏನೆಂದರೆ, ೪೮೦೦ ರೂಪಾಯಿ ಇನ್‌ಕಂ ಎಂದು ಕಂಡೀಷನ್ ಇದೆ. ಸ್ಲಂನಲ್ಲಿರುವವರು ಇನ್‌ಕಂ ಟ್ಯಾಕ್ಸ್ ಕೊಡುವವರಲ್ಲ, ಸೇಲ್ಸ್ ಟ್ಯಾಕ್ಸ್ ಕೊಡುವವರಲ್ಲ, ಆದ್ದರಿಂದ ಅವರಿಗೆ ಆ ಕಂಡೀಷನ್ನನ್ನು ಇನ್‌ಸಿಸ್ಟ್ ಮಾಡಬೇಕಾಗಿಲ್ಲ. ಅದೇರೀತಿ ಟೆನೆಂಟ್ಸ್ ವಿಚಾರದಲ್ಲಿ, ಇನ್ನೊಂದು ವಿಚಾರದಲ್ಲಿ ತಾವು ಇನ್‌ಸಿಸ್ಟ್ ಮಾಡದೆ ಆದಷ್ಟು ಬೇಗನೆ ಎಲ್ಲರಿಗೂ ಕೊಡುವ ಹಾಗೆ ಮಾಡಬೇಕು. ಆದು ಬೆಂಗಳೂರು ನಗರದಲ್ಲಿ ೭೦-೮೦ ಲಕ್ಷ ಬರಬಹುದು. ನಮ್ಮ ಪ್ರೈಮಿನಿಸ್ಟರ್ ಡ್ರಾಟ್ ಬಂದಾಗ ೨ ಕೋಟಿ ಬೋರ್‌ವೆಲ್ಸ್ ಹಾಕಿಸುವುದಕ್ಕೆ ಕೊಟ್ಟಿದ್ದರು, ಅವರು ಇಂತಹ ಏನೂ ಕಂಡೀಷನ್ಸ್ ಹಾಕುವುದಕ್ಕೆ ನೋಡುವುದಿಲ್ಲ. ಆದ್ದರಿಂದ ದುಡ್ಡನ್ನು ಆದಷ್ಟು ಬೇಗನೆ ರಿಲೀಸ್ ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ.—ಇದಕ್ಕೆ ಇನ್‌ಕಂ ಲಿಮಿಟ್ ಹೇಳಿದ್ದೇವೆ. ತಮ್ಮ ಸಲಹೆ ಒಳ್ಳೆಯ ಸಲಹೆ ಇದೆ. ಆದನ್ನು ಪರಿಶೀಲನೆ ಮಾಡಿ ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡುತ್ತೇವೆ. ಎರಡನೆಯದು ಟೆನೆಂಟ್, ದಿಸ್ ರಿಸ್ಟ್ರಿಕ್ಷನ್ ವಿ ಹ್ಯಾವ್ ನಾಟ್ ಪುಟ್. ಒಂದು ವೇಳೆ ಅಂಥಾದ್ದು ನನ್ನ ನೋಟೀಸಿಗೆ ತಂದರೆ ಐ ವಿಲ್ ಸಿ ದಟ್ ಇಟ್ ಈಸ್ ಸೆಟ್ ರೈಟ್. ಅನ್ ಆಥರೈಸ್ಡ್ ಲೇಔಟಿಂಗ್ ಫ್ರಂ ಡ್ರೈನ್ಸ್ ಆನ್ ಆಥರೈಸ್ಡ್ ಆಕ್ಯುಪೇಷನ್ಸ್ ಇರಬಹುದು But, wherever the Government has taken decision not to shift, such slums, we will rehabilitate and regularise. ಆ ಸ್ಲಂಮ್ಸನ್ನು ಶಿಫ್ಟ್ ಮಾಡಬಾರದು ಆ ಜನಗಳಿಗೆ ಅಲ್ಲಿ ರಿಹ್ಯಾಬಿಲಿಟೇಷನ್ ಮಾಡಬೇಕು ಎಂದು ಡಿಸಿಷನ್ ತೆಗೆದುಕೊಂಡಿದ್ದೇವೆ. ಆ ಸ್ಲಮ್ಸನ್ನು ರೆಗ್ಯುಲರೈಸ್ ಮಾಡಲಿಕ್ಕೆ ಮತ್ತು ಆ ಜನಗಳಿಗೆ ಸಹಾಯ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೆ, ತಾವು ಭಾಷಣ ಮಾಡಲಿಕ್ಕೆ ಅವಕಾಶಕೊಟ್ಟು ಬಿಟ್ಟರೆ ಕೆಲವು ವಿಚಾರ ಇತ್ತು, ಭಾಷಣ ಮಾಡದೇ ಇದ್ದವರಿಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುವುದು ವಿಶೇಷತೆ ಇರುತ್ತದೆ. ಏಕೆಂದರೆ ನಮ್ಮ ವ್ಯವಸ್ಥೆ ಹಾಗೆ ಆಗಿದೆ. ನಾವು ಯಾವಾಗಲೂ ಒಂದು ರೀತಿ ಊರು ಕೊಳ್ಳಿ ಕೊಡೆದ ನಂತರ ಕೋಟಿ ಬಾಗಿಲು ಹಾಕುವ ಕೆಲಸ ಮಾಡುತ್ತಾ ಇದ್ದೇವೆ. ಆದುದರಿಂದಲೇ ಈ ಅನಾಹುತಗಳು ಆಗುವುದಕ್ಕೆ ಕಾರಣವಾಗಿದೆ. ತಾವು ಬೆಂಗಳೂರು ನಗರವನ್ನು ಸುತ್ತಾಡುತ್ತಾ ಇದ್ದೀರಿ. ಇವತ್ತಿಗೂ ನಮ್ಮ ರಸ್ತೆ, ಫುಟ್‌ಪಾತ್‌ಗಳ ಮೇಲೆ ಕಟ್ಟಡಗಳು ನಿರ್ಮಾಣವಾಗುತ್ತಾ ಇವೆ. ಉದಾಹರಣೆಗೆ ರಾಜಾಜಿನಗರದ ಎಂಟ್ರೆನ್ಸ್‌ನಲ್ಲಿ ಒಂದು ಕಟ್ಟಡ ಆಗುತ್ತಿದೆ. ಇದಕ್ಕೆ ಅವಕಾಶ ಕೊಡುವಂಥಾದ್ದು ಆಗಿದೆ. ಮತ್ತು ನೀರು ಹರಿಯುತ್ತಾ ಇದೆಯೋ ನೀರು ಹರಿಯುವುದಕ್ಕೆ ಆಗತ್ಯವಾದ ಚರಂಡಿಗಳು ಇದೆಯೋ ಎಂದು ಇದರ ವ್ಯವಸ್ಥೆಯನ್ನು ನಾವು ಮೊದಲಾಗಿ ನೋಡುವುದಿಲ್ಲ. ಸರ್ಕಾರದಿಂದಲೇ ನಿರ್ಮಿತವಾದಂಥ ವರ್ಕಿಂಗ್ ವಿಮನ್ ಹಾಸ್ಟೆಲ್ ಕ್ವೀನ್ಸ್ ರೋಡ್‌ನಲ್ಲಿದೆ. ನಿಮ್ಮ ಇಂಜನಿಯರ್‌ಗಳು ಆ ಕಟ್ಟಡದ ಪ್ಲಾನ್ ಮಾಡಿದ್ದಾರೆ. ಯಾರ ಕಾಲದಲ್ಲಿ ಯಾರು ಮಾಡಿದ್ದರು ಏನ್ನುವ ಪ್ರಶ್ನೆಯಲ್ಲ. ತಾವು ಆ ಹುಡುಗಿಯರಿಗೆ ಸೀಟು ಕೊಡುವುದರ ಜೊತೆಗೆ ಒಂದು ಹೆಲಿಕಾಪ್ಟರ್ ಅಥವಾ ಒಂದು ದೋಣಿ ಕೊಡಬೇಕು. ಇಲ್ಲದೇ ಹೋದರೆ ಜೋರು ಮಳೆ ಬಂದರೆ ಅವರಿಗೆ ಹೋಗಲಿಕ್ಕೆ ಆಗುವುದಿಲ್ಲ. ಸಣ್ಣ ಮಳೆಗೆ ಒಂದು ಮಹಡಿ ಮುಳುಗುತ್ತದೆ. ಮೊನ್ನೆ ಬಿದ್ದ ದೊಡ್ಡ ಮಳೆಗೆ ಮೂರು ಮಹಡಿ ಮುಳುಗಿ ಬಿಟ್ಟಿದೆ. This is what we are doing. ಇದು ನಮ್ಮ ಗ್ರಹಚಾರ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಏನು ಆಗಬೇಕು ಎಂದು ಹೇಳಿಬಿಡಿರಿ.

ಶ್ರೀ ಬಿ ಎ. ಉಮರಬ್ಬ.—ನಾನು ಏನು ಹೇಳುತ್ತೇನೆಂದರೆ, ಒಂದು ಹೆಲಿಕಾಪ್ಟರ್ ಅಥವಾ ಒಂದು ದೋಣಿಯನ್ನು ಅವರಿಗೆ ಕೊಡಬೇಕು, ನನಗೆ ಬಿಲ್ಲ ಅವರಿಗೆ. ನಮ್ಮ ಜಿಲ್ಲೆಯಲ್ಲಿ ಕೆಲವು ಅನಾಹುತ ಆಗಿವೆ. ಇದು ಅತಿವೃಷ್ಟಿ ಎಂದು ನಾನು ಹೇಳುವುದಿಲ್ಲ. ಭತ್ತದ ಬೆಳೆ ಕುಯ್ಯಬೇಕೂ ಎನ್ನುವಾಗಲೇ ಮಳೆ ಬಂದುಬಿಟ್ಟಿತು. ಮಳೆ ಬಂದಿದ್ದರಿಂದ ಯಾವ ಭತ್ತವನ್ನು ರೈತ ಕುಯ್ದು ತೆಗೆದುಕೊಂಡು ಹೋಗಿ ಅದನ್ನು ಅಕ್ಕಿ ಮಾಡಬೇಕಾಗಿತ್ತೊ ಅದು ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ ಎನ್ನುವ ಪರಿಸ್ಥಿತಿ ಇದೆ. ಆದುದರಿಂದ ಜಿಲ್ಲಾಧಿಕಾರಿಗಳ ಮೂಲಕ ಇದರ ಒಂದು ಅಸೆಸ್‌ಮೆಂಟ್‌ಅನ್ನು ತಾವು ಮಾಡಿಸಬೇಕು. ಸ್ವಲ್ಪ ದುಡ್ಡು ನಮ್ಮ ಜಿಲ್ಲೆಗೆ ಕೊಟ್ಟಿದ್ದೀರಿ, ಕೊಟ್ಟಂಥ ದುಡ್ಡು ಮಳೆ ಕಾರಣದಿಂದ ಎಲ್ಲಿ ಅನಾಹುತವಾಗಿದೆ ಅಲ್ಲಿ ಬಳಸಿಕೊಳ್ಳಲಿ. ಎರಡು ಇಂಪಾರ್ಟೆಂಟ್ ಸ್ಪಾಟ್‌ಗಳನ್ನು ನಾನು ಹೇಳುತ್ತೇನೆ. ಜಿಲ್ಲಾಧಿಕಾರಿಗಳ ಮೂಲಕ ತಪಾಗೆ ಪತ್ರ ಕಳಿಸಿದ್ದೇನೆ. ಒಂದು ನನ್ನ ಕ್ಷೇತ್ರದಲ್ಲಿ ಕಡೇಶ್ವಾಲಿ ಎಂಬ ಬಹಳ ಪ್ರಾಚೀನವಾದಂಥ ದೇವಸ್ಥಾನ ಇದೆ. ಬಹಳ ಜನ ಭಕ್ತಾದಿಗಳು ಬಂದು ಹೋಗುವ ಜಾಗ ಅದು. ಅದು ನದಿ ದಡದಲ್ಲಿದೆ. ಮಳೆ ಬಂದಾಗ ನದಿಯಲ್ಲಿ ನೀರು ಜೋರಾಗಿ ಹರಿದು ಎಲ್ಲಿಯವರೆಗೆ ಕೊಚ್ಚಿಕೊಂಡು ಬಂದಿದೆ ಎಂದರೆ ಆ ದೇವಸ್ಥಾನ ಬಿದ್ದು ಹೋಗುವ ಪರಿಸ್ಥಿತಿ ಇದೆ. ಅದೇರೀತಿ ತುಂಬೆವಲಪ್ಪುರು ಎಂದು ಇದೆ ಅಲ್ಲಿ ಪ್ರಾಚೀನವಾದಂಥ ಮಸೀದಿ ಇದೆ ಇಂಥಾದ್ದೆಲ್ಲ ಬೇರೆ ಬೇರೆ ಕಡೆ ಆಗಿರಬಹುದು. Regarding all these things, I think, you have not reviewed any report.

ಓ-ಖಿಂ ಪಿ. ಎಂ.

ನಮ್ಮ ಪರಿಸ್ಥಿತಿ ಹೇಗಾಗುತ್ತಿದೆ ಎಂದರೆ, ಮಾನ್ಯ ಹೆಗಡೆಯವರ ಅನಾವೃಷ್ಟಿ, ಮಾನ್ಯ ಬೊಮ್ಮಾಯಿಯವರ ಅತಿವೃಷ್ಟಿ. ಈ ಎರಡೂ ನಮಗೆ ವಿಚಿತ್ರವಾದ ಸೃಷ್ಟಿಯಾಗಿವೆ, ಶನಿ ಹಿಡಿದವ ಸೆರತೆಗೆ ಹೋದರೆ...inspite of unpresident...

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು.

ಪ್ರಕಟಣೆಗಳು

ಪ್ರಕಟಣೆ ನಂ. ೧, ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸೆನೆಟ್ ಸಭೆಗೆ ವಿಧಾನ ಸಭೆಯಿಂದ ಐವರು ಸದಸ್ಯರನ್ನು...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಳೆ ಹಾನಿಯಿಂದ ತೊಂದರೆಗೊಳಗಾದವರು ಸಮೀಪದ ಪೋಲೀಸ್ ಠಾಣೆಗೆ ದೂರು ಕೊಡಬೇಕೆಂದು ಬೆಂಗಳೂರು ಮಹಾ ನಗರ ಪಾಲಿಕೆಯವರು ಆದೇಶ ಕೊಟ್ಟಿದ್ದಾರೆ. ಆದರೆ ದೂರು ಕೊಡಲು ಹೋದವರ ಹತ್ತಿರ ೫೦-೫೦ ರೂಪಾಯಿ ಕಿತ್ತುಕೊಳ್ಳುತ್ತಾರೆ. ಇದು ಯಾವ ಊರಾ ನ್ಯಾಯ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳೇ ಅದಕ್ಕೆ ಉತ್ತರ ಹೇಳಿ...

ಶ್ರೀ ಆರ್. ವಿ. ದೇಶಪಾಂಡೆ.—ಜನತಾ ಸರ್ಕಾರ ಬಂದನಂತರ ಸಂಪೂರ್ಣವಾಗಿ ಭ್ರಷ್ಟಾಚಾರ ನಿರ್ಮೂಲನವಾಗಿದೆ ಎಂದು ನಾನು ಹೇಳುತ್ತಿಲ್ಲ, ನೀವು ಇದ್ದಾಗಲೂ ಇತ್ತು, ಈಗಲೂ ಇದೆ. ತಾವು ನೇರವಾಗಿ ಯಾವ ಅಧಿಕಾರಿ ಆ ರೀತಿ ಕೇಳುತ್ತಾನೆ, ಎಂಬುದನ್ನು ಹೇಳಿ, I will see that he is suspended immediately.

ಅಧ್ಯಕ್ಷರು.—ನಾಗರತ್ನಮ್ಮನವರೇ, ತಾವು ಬರೆದು ಕಳುಹಿಸಿ...

(ಗೊಂದಲ)